ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು
ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ
ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು
ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು
ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ
ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ
ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ
ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು
★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 16 ಸಂಚಿಕೆ 8 ಆಗಸ್ಟ್ 2019 ರೂ.25

## ಅನಿಸಿಕೆಗಳು
### ಗುರೂಜಿ ಕೃಷ್ಣಾನಂದ
### ಅನು: ಚಂಪಾ

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಅಕ್ಟೋಬರ್ 1994ರ ಸಂಚಿಕೆ)

ಹೀಲಿಂಗ್ ಒಂದು ಅದ್ಭುತ ಅನುಭವ. ಅದು ಇನ್ನೂ ಹೆಚ್ಚಿನದನ್ನು ಹೊರಗೆಡಹುತ್ತದೆ. ನಾನು ಹಲವಾರು ನಿದರ್ಶನಗಳನ್ನು ನೋಡಿದ್ದೇನೆ, ಒಮ್ಮೊಮ್ಮೆ ಉಪಶಮನ ಬಹಳ ಶೀಘ್ರವಾಗಿ ಆಗುತ್ತದೆ, ಕೆಲವೊಮ್ಮೆ ಬಹು ನಿಧಾನ. ಅವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಸ್ವಾರಸ್ಯಕರ ಸಂಗತಿಗಳು ಬೆಳಕಿಗೆ ಬಂದವು.

ಪ್ರಕ್ರಿಯೆಯಲ್ಲಿ ಅಥವಾ ನನ್ನಲ್ಲಿ ವಿಶ್ವಾಸವಿರುವವರಿಗೆ ಪರಿಹಾರ ಬೇಗನೆ ದೊರೆತಿದೆ. ಧ್ಯಾನಿಗಳಿಗೆ ಹೆಚ್ಚೂ ಕಡಿಮೆ ತತ್‌ಕ್ಷಣದಲ್ಲೇ ದೊರೆತಿದೆ. ವಿಶ್ವಾಸವಿಲ್ಲದವರು ತಮಗೆ ಕಳಿಸಿದ ಚೈತನ್ಯಗಳನ್ನು ಸ್ವೀಕರಿಸಲಿಲ್ಲ. ನಾನು ಸೂಕ್ಷ್ಮ ಮಟ್ಟದಲ್ಲಿ ಅವರೊಂದಿಗೆ ಮಾತನಾಡಲು ಪ್ರಯತ್ನಿಸಿದೆ. ಅವರು ಹೀಲಿಂಗ್‌ಅನ್ನು ಒಪ್ಪಿಕೊಳ್ಳುವುದಕ್ಕೆ ಹಲವು ಗಂಟೆಗಳ ವಿವರಣೆ ನೀಡಬೇಕಾಗುತ್ತಿತ್ತು ಮತ್ತೆ ಕೆಲವೊಮ್ಮೆ ಮನವೊಲಿಕೆ ಮಾಡಬೇಕಾಗುತ್ತಿತ್ತು.

ಅನಾರೋಗ್ಯ ಕರ್ಮದಿಂದ ಉಂಟಾಗಿರದಿದ್ದರೆ ಹೀಲಿಂಗ್ ಸುಲಭ. ಆದರೆ ಅದು ಕರ್ಮಫಲವಾಗಿದ್ದಾಗ ನನಗೆ ಜಟಿಲ ಸಂಗತಿಗಳು ಎದುರಾದವು. ಆಗ ಋಷಿಗಳು ಹಿಂದಿನ ಜನ್ಮಗಳ ದೃಶ್ಯಗಳನ್ನು ತೋರಿಸಿ ಪರಿಹಾರ ನೀಡಿದರು. ಕರ್ಮ ಮತ್ತು ದೈವೀ ನ್ಯಾಯದ ವಿಧಾನವನ್ನು ತಿಳಿಯಪಡಿಸಲು ಇಲ್ಲಿ ಒಂದೆರಡನ್ನು ನಾನು ಹೇಳಬಯಸುತ್ತೇನೆ.

ಹೊಟ್ಟೆಯುರಿಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬ ನನ್ನ ಬಳಿ ಬಂದ. ಹೊಟ್ಟೆಯುರಿಯ ಕಾರಣವನ್ನು ತಿಳಿಯಲು ಡಾಕ್ಟರ್‌ಗಳಿಗೂ ಆಗಿರಲಿಲ್ಲ. ನಾನು ದರ್ಶನದಲ್ಲಿ ನೋಡಿದೆ. ಆತ ತನ್ನ ಹಿಂದಿನ ಜನ್ಮದಲ್ಲಿ ಒಬ್ಬನ ಹೊಟ್ಟೆಗೆ ನೋವುಂಟು ಮಾಡಿದ್ದ! ಹೀಲಿಂಗ್ ಚೈತನ್ಯಗಳನ್ನು ಆತನೆಡೆಗೆ ಹರಿಸುವುದಲ್ಲದೆ ನಾನು ಹೇಳಿದ ಅವಧಿಯವರೆಗೆ ಒಂದು ಮಂತ್ರವನ್ನು ಹೇಳಿಕೊಳ್ಳಲು ಹೇಳಿದೆ. ಸಂಗ್ರಹಿಸಿದ ಚೈತನ್ಯಗಳನ್ನು ಇರಿತಕ್ಕೊಳಗಾಗಿದ್ದ ವ್ಯಕ್ತಿಗೆ ಕಳುಹಿಸಲಾಯಿತು. ಆ ವ್ಯಕ್ತಿ ಆಗಲೇ ಮತ್ತೆ ಹುಟ್ಟಿ ಬಂದಿದ್ದ. ಋಷಿಗಳು ಅವನನ್ನು ಹುಡುಕಿ ತೆಗೆದರು. ಹೊಟ್ಟೆಯುರಿ ಮಾಯವಾಯಿತು. ಆದರೆ ಆತ ಧ್ಯಾನ ಮಾಡುವುದನ್ನು ನಿಲ್ಲಿಸಿದ. ಅದರಿಂದ ನನಗೆ ದುಃಖವಾಯಿತು. ನಾನು ಆತನಿಗೆ ನನಗಾದ ದರ್ಶನ ಮತ್ತು ಸೂಕ್ಷ್ಮ ಮಟ್ಟದಲ್ಲಿ ಮಾಡಿದ ಸಹಾಯದ ಬಗ್ಗೆ ತಿಳಿಸಲಿಲ್ಲ. ಅವು ಆಕಾಶಿಕ್ ರೆಕಾರ್ಡ್ಸ್‌ನಲ್ಲಿರುತ್ತವೆ.

ಮತ್ತೊಂದು ಸಂದರ್ಭದಲ್ಲಿ, ತೀವ್ರ ಬೆನ್ನು ನೋವಿನಿಂದ ನರಳುತ್ತಿದ್ದ ವ್ಯಕ್ತಿಯೊಬ್ಬ ಬಂದ. ಹೀಲಿಂಗ್ ಚೈತನ್ಯಗಳು ಯಾವುದೇ ಪರಿಹಾರವನ್ನು ನೀಡಲಿಲ್ಲ. ನಂತರ ತಿಳಿಯಿತು, ಆತ ಹಿಂದಿನ ಜನ್ಮದಲ್ಲಿ ಹಾವೊಂದನ್ನು ಕೊಂದಿದ್ದ, ಅಲ್ಲದೆ ಅದು ಪೂರ್ತಿ ಸಾಯುವ ಮೊದಲೇ ಅದನ್ನು ಸುಟ್ಟು ಹಾಕಿದ್ದ. ನಾವು ಆತನ ಕರ್ಮದೆಡೆಗೆ ಗಮನ ಹರಿಸಲಾರಂಭಿಸಿದಾಗ ಒಂದು ಆಶ್ಚರ್ಯ ಕಾದಿತ್ತು. ಒಬ್ಬ ಆಗಂತುಕ ಬಂದಿದ್ದ. ಸೂಕ್ಷ್ಮ ಲೋಕದ ಆಗಂತುಕ! ಅದೊಂದು ಹಾವಾಗಿತ್ತು!

ಅದು ಒಂದು ವಿಷಯವನ್ನು ತಿಳಿಸಲು ಬಂದಿತ್ತು. ಅದಕ್ಕೆ, ಅವನು ನರಳಬೇಕೆಂದಿತ್ತು! ಅವನ ಕರ್ಮವನ್ನು ನಾವು ಪರಿಹರಿಸುವುದು ಅದಕ್ಕೆ ಬೇಕಿರಲಿಲ್ಲ! ನ್ಯಾಯ! ನಾವು ಅದಕ್ಕೆ ಶಾಂತಿ ಮತ್ತು ಮುಕ್ತಿಯನ್ನು ದೊರಕಿಸಲು ನೆರವಾದರೆ ಆ ವ್ಯಕ್ತಿಯು ನರಳುತ್ತಿರಬೇಕಾಗಿಲ್ಲ ಎಂದು ತಾಳ್ಮೆಯಿಂದ ಅದರ ಮನವೊಲಿಸಲು ನನಗೆ ಸಾಧ್ಯವಾಯಿತು. ಅದು ಒಪ್ಪಿಕೊಂಡಿತು. ನಂತರ ಋಷಿಗಳು ಇಬ್ಬರಿಗೂ ಸಹಾಯ ಮಾಡಿದರು.

ಇಂತಹ ಹಲವಾರು ನಿದರ್ಶನಗಳಿವೆ. ಪ್ರತಿಯೊಂದೂ ವಿಭಿನ್ನ, ವಿಚಿತ್ರ, ವಿಚಿತ್ರ, ಈ ಮಾನವ ಮಟ್ಟದಲ್ಲಿ. ಇವುಗಳಿಂದಾದ ಅನುಭವಗಳು ಪುಸ್ತಕಗಳಲ್ಲಿಲ್ಲದ ಅನೇಕ ವಿಷಯಗಳನ್ನು ನನಗೆ ಕಲಿಸಿವೆ. ಬದುಕಿದ್ದರೆ ಒಂದು ದಿನ ಅವೆಲ್ಲವನ್ನೂ ಬರೆದಿಡುತ್ತೇನೆ.

ತಪೋನಗರ ಅಣಿಯಾಗುತ್ತಿದೆ. ಇದು ಉನ್ನತ ಲೋಕಗಳ ಚೈತನ್ಯಗಳಿಂದ ತುಂಬಿ ತುಳುಕುತ್ತಿದೆ. ಉನ್ನತ ಲೋಕದ ವ್ಯಕ್ತಿಗಳು ನಿಯತವಾಗಿ ಇಲ್ಲಿಗೆ ಜ್ಞಾನ ಮತ್ತು ಪ್ರೇಮವನ್ನು ಹೊತ್ತು ತರುತ್ತಾರೆ. ಆಧ್ಯಾತ್ಮಿಕ ಮಟ್ಟದಲ್ಲಿ ಮತ್ತೊಂದು ಶಂಬಲಕ್ಕೆ ಆಗಲೇ ಅಡಿಪಾಯವನ್ನು ಹಾಕಲಾಗಿದೆ. ಮುಂದಿನ ಹಂತವೆಂದರೆ, ಬದಲಾವಣೆಗಳ ನಿರ್ಧರಿತ ವೇಗಕ್ಕನುಗುಣವಾಗಿ ಅವುಗಳನ್ನು ಭೌತಿಕ ಮಟ್ಟಕ್ಕಿಳಿಸುವುದು. ಅದಷ್ಟು ಸುಲಭವಲ್ಲ. ಪ್ರೇಮ, ಅರ್ಪಣಾ ಭಾವ ಮತ್ತು ಶ್ರದ್ಧೆಗಳು ಎಲ್ಲವನ್ನೂ ಸಾಧ್ಯವಾಗಿಸುವುದಷ್ಟೇ ಅಲ್ಲ ಸುಲಭವೂ ಆಗಿಸುತ್ತವೆ.

ಕೆಲಸವೊಂದೇ ಅಲ್ಲದೆ, ಪ್ರತಿಯೊಬ್ಬ ಧ್ಯಾನಿಯೂ ಪ್ರತಿಯೊಂದು ಭೇಟಿಯಲ್ಲೂ ಪಡೆದುಕೊಂಡು ಹೋಗಿ ತನ್ನನ್ನು ಶ್ರೀಮಂತಗೊಳಿಸಿಕೊಳ್ಳಲು ಇಲ್ಲಿ ಸಾಕಷ್ಟಿದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶನಿವಾರ** (ಬೆಳಿಗ್ಗೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಶ್ರದ್ಧಾಂಜಲಿ ಇಂಟೆಗ್ರೇಟೆಡ್ ಶಾಲೆಯ ಶಿಕ್ಷಕರು ಮತ್ತು ತಂದೆತಾಯಂದಿರು ಕೈಗಾರಿಕಾ ತರಬೇತಿಯ ಸದಸ್ಯರೊಡಗೂಡಿ ('ಅಸೋಷಿಯೇಶನ್ ಫಾರ್ ಪೀಪಲ್ ವಿತ್ ಡಿಸ್ಸಬಿಲಿಟೀಸ್'ಅನ್ನು ಒಳಗೊಂಡಂತೆ), 13-7-2019ರಂದು ಬೆಳಕನ್ನು ಚಾನಲ್ ಮಾಡಿದರು.

### ಸುದ್ದಿ-ಸೂಚನೆಗಳು

- 25-08-2019 ರಂದು ತಪೋನಗರದಲ್ಲಿ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸ ಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗ ವಹಿಸಲಿಚ್ಛಿಸುವ ಸಾಧಕರು ತಮ್ಮ ಹೆಸರನ್ನು ದಿನಾಂಕ 23-08-2019 ರೊಳಗೆ ಮಾನಸ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- ದಿನಾಂಕ 02-07-2019 ರಂದು ಸೂರ್ಯಗ್ರಹಣದ ಸಮಯದಲ್ಲಿ ಮತ್ತು 17-07-2019 ರಂದು ಚಂದ್ರ ಗ್ರಹಣದ ಸಮಯದಲ್ಲಿ, ತಪೋನಗರದ ಸಾಧಕರು ಮೆಡಿಟೇಶನ್ ಹಾಲ್‌ನಲ್ಲಿ ಸೇರಿ ಗ್ರಹಣದ ಚೈತನ್ಯಗಳನ್ನು ಚಾನಲ್ ಮಾಡಿದರು.
- ದಿನಾಂಕ 16-07-2019 ರಂದು ಸಾಧಕರು ತಪೋನಗರದ ಮೆಡಿಟೇಶನ್ ಹಾಲ್‌ನಲ್ಲಿ ಸೇರಿ ಗುರು ಪೂರ್ಣಿಮೆಯನ್ನು ಆಚರಿಸಿದರು ಮತ್ತು ಇಡೀ ವಿಶ್ವಕ್ಕೆ ಪರಬ್ರಹ್ಮನ ಚೈತನ್ಯಗಳನ್ನು ಚಾನಲ್ ಮಾಡಿದರು.
- ಶಂಬಲದ ವಿಶೇಷ ಚೈತನ್ಯಗಳನ್ನು ಪಡೆಯಲು, ಶಂಬಲ ಗ್ರೂಪ್‌ನ ಸದಸ್ಯರು 16-07-2019 ರಂದು ತಪೋನಗರದ ಧ್ಯಾನ ಮಂದಿರದಲ್ಲಿ ಸೇರಿದ್ದರು.
- 'ರಾ' ಲೋಕದ ವಿಶೇಷ ಚೈತನ್ಯಗಳನ್ನು ಪಡೆಯಲು, ರಾ ಗ್ರೂಪ್‌ನ ಸದಸ್ಯರು 21-07-2019 ರಂದು ತಪೋನಗರದ ಧ್ಯಾನ ಮಂದಿರದಲ್ಲಿ ಸೇರಿದ್ದರು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 23-08-2019 | ಶ್ರೀ ಕೃಷ್ಣ ಜನ್ಮಾಷ್ಟಮಿ<br>ವಿಶೇಷ ಧ್ಯಾನ:<br>ಮಧ್ಯಾಹ್ನ 12 ರಿಂದ 1 |
| 25-08-2019 | ಅಮರರವರ ಮಹಾಸಮಾಧಿ ಕಾರ್ಯಕ್ರಮ |

### ಆನೇಕಲ್‌ನಲ್ಲಿ ಕಾರ್ಯಕ್ರಮ

ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ದಿನಾಂಕ 26-08-2019 ರಂದು ಸಂಜೆ 6 ಘಂಟೆಗೆ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಗುರು | ಅಮಾವಾಸ್ಯೆ |
| 08 | ಗುರು | ಶುಕ್ಲ ಅಷ್ಟಮಿ |
| 09 | ಶುಕ್ರ | ಮಹಾಲಕ್ಷ್ಮಿ ಪೂಜೆ |
| 10 | ಶನಿ | ಶುಕ್ಲ ದಶಮಿ |
| 15 | ಗುರು | ಪೂರ್ಣಿಮಾ |
| 23 | ಶುಕ್ರ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 25 | ಭಾನು | ಅಮರರವರ ಮಹಾಸಮಾಧಿ ಕಾರ್ಯಕ್ರಮ |
| 29 | ಗುರು | ಮಾಸ ಶಿವರಾತ್ರಿ |
| 30 | ಶುಕ್ರ | ಅಮಾವಾಸ್ಯೆ |

### ಅಮರರವರ ಮಹಾಸಮಾಧಿ ಕಾರ್ಯಕ್ರಮ
### ಭಾನುವಾರ, 25-08-2019

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ |
| | ಭಾಷಣಗಳು |
| | ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

ಶ್ರೀ ಕೃಷ್ಣ ಜನ್ಮಾಷ್ಟಮಿ ವಿಶೇಷ ಧ್ಯಾನದ ತಂತ್ರ ಒಂದು ದೊಡ್ಡ ನೀಲಿಬಣ್ಣದ ಬೆಳಕಿನ ಗೋಳವನ್ನು ಅಥವಾ ನೀಲಿ ಬೆಳಕಿನಿಂದ ಮಾಡಿದ ಭಗವಾನ್ ಶ್ರೀಕೃಷ್ಣನ ಆಕಾರವನ್ನು ಊಹಿಸಿಕೊಳ್ಳಿ, ನೀವು ಒಂದು ಬೆಳಕಿನ ಕಿರಣವಾಗಿ ಈ ಗೋಳವನ್ನು ಅಥವಾ ಆಕಾರವನ್ನು ಪ್ರವೇಶಿಸಿ. ನೀವು ಶ್ರೀಕೃಷ್ಣನೊಳಗೆ ಇದ್ದೀರಿ. ಅವನನ್ನು ಅನುಭವಿಸಿ. ಈ ತಂತ್ರವನ್ನು ಒಂದು ದಿನದಲ್ಲಿ ಎಷ್ಟು ಸಮಯದವರೆಗೆ ಬೇಕಾದರೂ, ಎಷ್ಟು ಬಾರಿಯಾದರೂ ಅಭ್ಯಾಸ ಮಾಡಬಹುದು. ಈ ತಂತ್ರವನ್ನು ಹತ್ತು ದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಿ.

## ಮೀರಿಸಲಾಗದ ಸೂಪರ್‌ಹೀರೋ

**ಅಪೂರ್ವ ದೇಶ್‌ಪಾಂಡೆ; ಅನು: ಸುಜಾತ ವಿ**

"ಅವನು ಬೆಳೆಯಲೇಬೇಕು, ಆದರೆ ನಾನು ಇಳಿಯಲೇಬೇಕು" – ಜಾನ್ ದಿ ಬ್ಯಾಪ್ಟಿಸ್ಟ್

ಇತ್ತೀಚಿನ ವಾರಗಳಲ್ಲಿ ಜನರು ಹೊಸ ಸೂಪರ್‌ಹೀರೋ ಚಲನ ಚಿತ್ರ ನೋಡಲು ಗುಂಪಾಗಿ ಹೋಗುತ್ತಿದ್ದಾರೆ, ನನ್ನ ಸುತ್ತಲಿನ ಜನರು ಸೂಪರ್‌ಹೀರೋಗಳ ಪ್ರತಿಯೊಂದು ಹೊಡೆತಕ್ಕೂ ಆಹಾ ಓಹೋ ಎಂದು ಕೂಗುತ್ತಿದ್ದರು. ಆದರೆ ಪ್ರತಿಯೊಬ್ಬ ಸೂಪರ್‌ಹೀರೋ ಕೂಡಾ ಅಮರರವರಿಗೆ ಹೋಲಿಸಿದರೆ ಎಷ್ಟೊಂದು ಮಂಕಾಗಿ ಕಾಣುತ್ತಾರಲ್ಲಾ ಎಂಬ ನನ್ನ ಆಲೋಚನೆಯನ್ನು ತಪ್ಪಿಸಲು ನನಗೆ ಸಾಧ್ಯವಾಗಲಿಲ್ಲ!

ಅಮರರವರ ಜೀವನ ಸಾಹಸಮಯವಾಗಿತ್ತು. ಅವರು ಬೆಳಕಿಗಿಂತ ಹೆಚ್ಚಿನ ವೇಗದಲ್ಲಿ ಪ್ರಯಾಣ ಮಾಡಬಲ್ಲವರಾಗಿದ್ದರು ಮತ್ತು ಒಮ್ಮೆಗೇ ಅನೇಕ ಜಾಗಗಳಲ್ಲಿ ಕಾಣಿಸಿಕೊಳ್ಳಬಲ್ಲವರಾಗಿದ್ದರು! ಅವರು ನಮ್ಮ ಭೂಮಿಗಿಂತ ಬಹಳ ಭಿನ್ನವಾಗಿದ್ದ ಭೂಮಿಗಳಿಗೆ ಭೇಟಿ ನೀಡಿದ್ದರು, ಕೆಲವು ನಮ್ಮ ಭೂಮಿಗಿಂತ ಮುಂದುವರೆದಿದ್ದರೆ ಕೆಲವು ಅಷ್ಟೇನೂ ಮುಂದುವರೆದಿರಲಿಲ್ಲ. ಅವರು ಮಾಡಿದ ಕೆಲಸ ನಮ್ಮ ಕಲ್ಪನೆಯ ಉತ್ತುಂಗಕ್ಕೆ ಕರೆದೊಯ್ಯುತ್ತಿತ್ತು ಹಾಗೂ ಅವರ ನಮ್ರತೆ ನಂಬಲಸಾಧ್ಯವಾಗಿತ್ತು. ನಮಗೆಲ್ಲಾ ಗೊತ್ತಿರುವಂತೆ, ಅವರು ಅತ್ಯಂತ ಸರಳವಾಗಿ ತಮ್ಮ ಅನುಭವಗಳನ್ನು ನಿರೂಪಿಸುತ್ತಿದ್ದರು. ತಾವು ದೊಡ್ಡ ವ್ಯಕ್ತಿಯೆಂದು ಜನರಿಗೆ ತೋರಿಸಿಕೊಳ್ಳುತ್ತಿರಲಿಲ್ಲ.

ಅಮರರವರು ಲೋಕಪ್ರಚಾರದಿಂದ ಸದಾ ದೂರವಿರುತ್ತಿದ್ದರು. ಅವರು ಯಾವಾಗಲೂ ಕಡಿಮೆ ವಿದ್ಯಾರ್ಥಿಗಳನ್ನು ಬಯಸುತ್ತಿದ್ದರು ಹಾಗೂ ಅವರಿಗೆ ವೈಯಕ್ತಿಕ ಮಾರ್ಗದರ್ಶನ ನೀಡುತ್ತಿದ್ದರು. ಅವರ ಗಮನ ಯಾವಾಗಲೂ ಋಷಿಗಳ ಕೆಲಸದಲ್ಲಿತ್ತು. ಮತ್ತೊಂದು ದೇಶಕ್ಕೆ ಭಾರತದ ರಾಯಭಾರಿಯಾಗುವ ಅವಕಾಶವನ್ನು ಋಷಿಗಳ ಕೆಲಸದ ಸಲುವಾಗಿ ತ್ಯಜಿಸಿದರು!

"ಪ್ರೀತಿಯಿಂದ, ಭಕ್ತನು ಕೂಡ ದೇವನಾಗಬಹುದು. ದೇವರು ಮತ್ತು ಅವನ ಭಕ್ತರು ಸಮುದ್ರ ಮತ್ತು ಅದರ ಅಲೆಗಳಿದ್ದಂತೆ." – ಸಂತ್ ಏಕನಾಥ್

ಅಮರರವರು ಮಾಸ್ಟರ್‌ಗಳ ಮೇಲೆ ಇಟ್ಟಿರುವ ಪ್ರೀತಿಗೆ ಮತ್ತು ನಮ್ಮ ಮೇಲೆ ಇಟ್ಟಿರುವ ಪ್ರೀತಿಗೆ ಯಾವುದೂ ಸಾಟಿಯಿಲ್ಲ. ಅವರು ಋಷಿಗಳ ಕೆಲಸಕ್ಕಾಗಿ ತಮ್ಮನ್ನು ಮುಡಿಪಾಗಿ ಇಟ್ಟುಕೊಂಡು ನಮ್ಮನ್ನು ಸತ್ಯ ಯುಗಕ್ಕೆ ಕರೆದುಕೊಂಡು ಹೋಗಲು ಸಹಾಯ ಮಾಡುತ್ತಿದ್ದರು. ಆದರೆ ಅನೇಕ ಬಾರಿ ಆ ಕೆಲಸಗಳಲ್ಲಿ ಅದರದೇ ಆದ ಅಪಾಯಗಳಿರುತ್ತಿದ್ದವು. ವಿಶ್ವಾಮಿತ್ರ ಮಹರ್ಷಿಗಳು ಸತ್ಯ ಯುಗಕ್ಕಾಗಿ ಮಹಾಮೇರು ಪರ್ವತವನ್ನು ಸರಿಹೊಂದಿಸಲು ಪ್ರಾರಂಭಿಸಿದಾಗ, ಅವರು ಋಷಿಗಳ ಕಾರ್ಯಕರ್ತರಿಗೆ ಮಹಾಮೇರುವನ್ನು ಸರಿಯಾಗಿ ಶ್ರುತಿಗೊಳಿಸುವ ಮುನ್ನ ಪ್ರಾರಂಭದ ಕೆಲವು ಕಂಪನಗಳನ್ನು ಹೀರಿಕೊಳ್ಳಬೇಕಾಗುತ್ತದೆ ಎಂದು ವಿವರಿಸಿದ್ದರು. ಅದನ್ನು ಸರಿಹೊಂದಿಸುವ ಸಮಯದಲ್ಲಿಯೇ ಅಮರರವರಿಗೆ ಹೃದಯಾಘಾತವಾಗಿ ಬಹಳ ದಿವಸ ಹಾಸಿಗೆ ಹಿಡಿದಿದ್ದು. ಅವರು ನಮ್ಮನ್ನು ನಿಸ್ವಾರ್ಥವಾಗಿ ಪ್ರೀತಿಸುತ್ತಿದ್ದರು ಮತ್ತು ಈಗಲೂ ಪ್ರೀತಿಸುತ್ತಿದ್ದಾರೆ.

ಅಮರರವರು, ಗುರೂಜಿಯವರಂತೆಯೇ, ನಮ್ಮ ತಂದೆಯಾಗಿ, ನಮ್ಮ ಗುರುವಾಗಿ ಮತ್ತು ನಮ್ಮ ಸೂಪರ್‌ಹೀರೊ ಆಗಿ ಮುಂದುವರಿಯುತ್ತಿದ್ದಾರೆ! ಅವರು ನಮ್ಮ ಮೇಲೆ ಇಟ್ಟಿರುವ ನಿರಂತರವಾದ ಪ್ರೀತಿಯೇ ನಮ್ಮನ್ನು ಸತ್ಯ ಯುಗಕ್ಕೆ ಕರೆದೊಯ್ಯುವುದು!

## ಅಮರ – ಒಬ್ಬ ಅನುಭಾವಿ

**ಸುಜಾತ ವಿ**

ಅಮರರವರು ಯಾವಾಗಲೂ ಪ್ರಶಾಂತರಾಗಿರುತ್ತಿದ್ದರು ಮತ್ತು ಯಾವ ವಿಷಯದಲ್ಲೂ ಯಾವಾಗಲೂ ದೂರು ಹೇಳುತ್ತಿರಲಿಲ್ಲ. ಅಮರರವರು ವಿಶಿಷ್ಟವಾದ ಮಾಸ್ಟರ್. ಸತ್ಯದ ಅನ್ವೇಷಣೆಯಲ್ಲಿರುವ ಪ್ರತಿಯೊಬ್ಬರ ದಾಹವನ್ನು ನೀಗಿಸಲು ಅಮರರವರು ಸಪ್ತರ್ಷಿಗಳಿಂದ ಪಡೆದ ವಿಶಿಷ್ಟವಾದ ಧ್ಯಾನದ ವಿಜ್ಞಾನವನ್ನು ಮನುಕುಲಕ್ಕೆ ಪರಿಚಯಿಸಿದರು. ಅವರು ಸಾವಿರಾರು ಜನರಿಗೆ ಧ್ಯಾನವನ್ನು ಕಲಿಸಿದರು ಮತ್ತು ಅವರಿಗೆ ಮುಕ್ತಿಯನ್ನು ದೊರಕಿಸಿ ಕೊಟ್ಟರು. ಅವರು ಒಬ್ಬ ಅನುಭಾವಿ (Mystic). ಅವರು ತಮ್ಮ ಸೂಕ್ಷ್ಮ ಶರೀರದಿಂದ ಋಷಿಗಳ ಕಾರ್ಯ ನಿರ್ವಹಿಸುತ್ತಿದ್ದರು ಮತ್ತು ಬಹಳ ವಿನಮ್ರರಾಗಿದ್ದರು. ಅವರು ಪ್ರಚಾರದಿಂದ ದೂರವಿದ್ದರು. ಬಹಳ ಜನರಿಗೆ ಅವರ ಸಾಮರ್ಥ್ಯದ ಬಗ್ಗೆ ಅರಿವಿರಲಿಲ್ಲ. ಅವರಿಗೆ ಮಾನವ ಕುಲದ ಕಲ್ಯಾಣದಲ್ಲಿ ಕಾಳಜಿ ಇತ್ತು. ಅವರು ಬಹಳ ಸಹಾನುಭೂತಿಯುಳ್ಳವರಾಗಿದ್ದರು ಮತ್ತು ಇಡೀ ಸೃಷ್ಟಿಯನ್ನೇ ಬಹಳ ಪ್ರೀತಿಸುತ್ತಿದ್ದರು. ಪ್ರತಿಯೊಂದರಲ್ಲೂ ದೈವತ್ವವನ್ನೇ ಕಾಣುತ್ತಿದ್ದರು.

ಹಿಂದಿನ ಒಂದು ಜನ್ಮದಲ್ಲಿ ಅವರು ಸಂತ ಏಕನಾಥ್ ರವರಾಗಿದ್ದಾಗ, ಅವರು ಕಾಶಿಯಿಂದ ಶೇಖರಿಸಿದ ಗಂಗಾ ಜಲವನ್ನು ಶಿವನಿಗೆ ಅರ್ಪಣೆ ಮಾಡಲು ತಮ್ಮ ಸ್ನೇಹಿತರೊಂದಿಗೆ ರಾಮೇಶ್ವರಕ್ಕೆ ಪ್ರಯಾಣ ಮಾಡುತ್ತಿದ್ದರು, ಆಗ ಒಂದು ಕತ್ತೆ ಬಾಯಾರಿಕೆಯಿಂದ ಸಾಯುವುದನ್ನು ನೋಡಿದರು. ಅವರು ತೆಗೆದುಕೊಂಡು ಹೋಗಿದ್ದ ಪವಿತ್ರ ಜಲವೆಲ್ಲವನ್ನೂ ಆ ಕತ್ತೆಗೆ ಅರ್ಪಿಸಿ ಅದಕ್ಕೆ ಜೀವ ತುಂಬಿದರು. ಅದುವೇ ಮಹರ್ಷಿ ಅಮರ!

ಅಮರರವರು ಮನುಕುಲಕ್ಕೆ ಶಂಬಲದ ದಾರಿಯನ್ನು ತೋರಿಸಿದರು – ಅದು ಸ್ವರ್ಣ ನಗರ – ಭೂಮಿಯ ಮೇಲಿನ ಸ್ವರ್ಗ. ಅಲ್ಲಿನ ಜನರು ಪ್ರಶಾಂತವಾಗಿ ಮತ್ತು ಪರಿಪೂರ್ಣರಾಗಿ ಬದುಕುತ್ತಾರೆ. ಶಂಬಲವನ್ನು ತಪೋನಗರದಲ್ಲಿ ಸ್ಥಾಪಿಸಬೇಕೆನ್ನುವುದು ಅವರ ಕನಸಾಗಿತ್ತು. ನಾವು ಅವರ ಹೆಜ್ಜೆಯನ್ನೇ ಅನುಸರಿಸುತ್ತಾ ತಪೋನಗರದಲ್ಲಿ ಶಂಬಲವನ್ನು ಸ್ಥಾಪಿಸುವ ಅವರ ಕನಸನ್ನು ನನಸಾಗಿಸೋಣ.

## ಲೈಟ್ ಚಾನಲ್ಸ್
## ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

## ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಜನವರಿ 2006 (ಮುಂದುವರಿದ ಭಾಗ)

ಇಲ್ಲಿರುವ ಅಥವ ಇರದಿರುವ ಪ್ರತಿಯೊಬ್ಬರಿಗೂ ತಮ್ಮದೇ ಆದ ನೋವುಗಳಿರುತ್ತವೆ; ಯಾರಾದರೊಬ್ಬರು ನಮ್ಮ ಮನ ನೋಯಿಸಿರಬಹುದು, ಯಾರಾದರೊಬ್ಬರು ನಮಗೆ ನಂಬಿಕೆ ದ್ರೋಹ ವೆಸಗಿರಬಹುದು, ಇತ್ಯಾದಿ. ನಂಬಿಕೆ ದ್ರೋಹದಿಂದ ಮತ್ತು ಮನನೋಯಿಸಿದ್ದರಿಂದ ಉಂಟಾದ ವೇದನೆಯನ್ನು ನಮಗೆ ಮರೆಯಲಾಗುವುದಿಲ್ಲ. ಮೂವತ್ತು ವರ್ಷಗಳ ನಂತರವೂ ಇದನ್ನು ನೆನೆದು ಹೇಳುತ್ತೇವೆ, "ಈ ವ್ಯಕ್ತಿ ನನಗೆ ನೋವುಂಟು ಮಾಡಿದ." ಇದನ್ನು ತಪ್ಪಿಸಲು ಸಾಧ್ಯವಿಲ್ಲ. ಅದರ ಅರಿವು ಮತ್ತು ನೆನಪು ನಮಗಿದೆ ಎನ್ನುವ ಕಾರಣದಿಂದಷ್ಟೇ ನಮ್ಮ ಆಧ್ಯಾತ್ಮಿಕತೆಯ ಮಟ್ಟ ಕಡಿಮೆಯಿದೆ ಎನ್ನಲಾಗದು. ನಾನು ಹೇಳಿದ ಹಾಗೆ ನೆನಪನ್ನು ಅಳಿಸಲು ಆಗುವುದಿಲ್ಲ. ನೆನಪು ನಮ್ಮ ವ್ಯವಸ್ಥೆಯ ಒಂದು ಭಾಗ. ಆದರೆ ವಿಷಯವೇನೆಂದರೆ ಈ ವೇದನೆಯಿಂದಾಗಿ ನಮ್ಮಲ್ಲಿ ಕೋಪವಿರುತ್ತದೆ. ನಮಗೆ ನೋವುಂಟಾಗಿರುವುದರಿಂದಾಗಿ ನಾವು ಕೋಪಗೊಳ್ಳುತ್ತೇವೆ. ಈ ಕೋಪವನ್ನು ನಾವು ದೂರ ಎಸೆಯಬೇಕು. ನಾನು 'ನಾವು' ಎಂದು ಹೇಳಿದಾಗ, ಅದು ಧ್ಯಾನಿಗಳಾದ ನಾವು ಅಥವ ಸಾಧನೆ ಮಾಡುತ್ತಿರುವ ಯಾವುದೇ ವ್ಯಕ್ತಿಯಾಗಬಹುದು. ನಾವು ಈ ಕೋಪದಿಂದ ಮತ್ತು ಕಹಿಭಾವನೆಯಿಂದ ಹೊರಬರಲಾಗದಿದ್ದರೆ ಆಧ್ಯಾತ್ಮಿಕವಾಗಿ ಬೆಳೆಯಲು ಸಾಧ್ಯವಿಲ್ಲ. ಇದು ಸುಲಭವಲ್ಲ, ಆದರೆ ಧ್ಯಾನ ಮಾಡಿದಾಗ ಇದು ಸಾಧ್ಯ; ಪ್ರಯತ್ನಗಳನ್ನು ಮಾಡಿದಾಗ ಇದು ಸಾಧ್ಯ. ಇದೇ ನಮ್ಮ ಹೋರಾಟ. ಈ ಕಹಿಭಾವನೆಯಿಂದ ಮತ್ತು ಕೋಪದಿಂದ ಹೊರಬರುವುದೇ ನಮ್ಮ ಸಾಧನೆ. ನಾನೇನೂ ಹೊಸ ವಿಷಯವನ್ನು ಹೇಳುತ್ತಿಲ್ಲ. ಆದರೆ ಇದೊಂದು ಬೋಧನೆಯ ತರಗತಿಯಾಗಿರದೆ, ತರಬೇತಿ ನೀಡುವ ತರಗತಿಯಾಗಿರುವುದರಿಂದಾಗಿ ನಾನಿದನ್ನು ಮತ್ತೊಮ್ಮೆ ಹೇಳುತ್ತಿದ್ದೇನೆ. ನಾವಿದನ್ನು ಅಭ್ಯಾಸಕ್ಕೆ ತರಬೇಕಾಗಿರುವ ಕಾರಣದಿಂದಾಗಿ ನಾನಿದನ್ನು ಪುನರುಚ್ಚರಿಸುತ್ತಿದ್ದೇನೆ. ಈಗಿನಿಂದಲೇ ನಾವಿದನ್ನು ಆಚರಿಸಲು ಪ್ರಾರಂಭಿಸೋಣ.

ಈ ಕಹಿಭಾವವನ್ನು ಬಹಳ ಸಮಯದವರೆಗೆ ನಮ್ಮಲ್ಲಿ ಹೊಂದಿದ್ದರೆ ಅದು ಸಂಬಂಧಗಳನ್ನು ಹಾಳುಮಾಡುತ್ತದೆ. ಮಹಾನ್ ನಟನೊಬ್ಬ ಆಸ್ಪತ್ರೆಯಲ್ಲಿದ್ದಾಗ ಅವನಿಗಾಗಿ ಇಡೀ ದೇಶವೇ ಪ್ರಾರ್ಥನೆ ಮಾಡಿತು. ಅದು ಬಹಳ ಮನ ಮುಟ್ಟುವಂತಿತ್ತು! ಆದರೆ ಜನರು ಅವರಿಗಾಗಿ ಪ್ರಾರ್ಥಿಸುತ್ತಿದ್ದಾಗ, ಆದಾಯ ತೆರಿಗೆ ಅಧಿಕಾರಿಗಳು ಅಲ್ಲಿಗೆ ತೆರಳಿ ಅವರಿಗೆ ನೋಟೀಸು ಕೊಟ್ಟರು. ಕಟುತ್ವ, ವ್ಯಕ್ತಿಯನ್ನು ಬಹಳ ನಕಾರಾತ್ಮಕನನ್ನಾಗಿಸುತ್ತದೆ ಮತ್ತು ಪ್ರಾಣಾಂತಕನನ್ನಾಗಿ ಕೂಡ ಮಾಡುತ್ತದೆ. ಅದೇನೇ ಇರಲಿ, ನಮ್ಮಲ್ಲೇನಾದರೂ ಕಹಿಭಾವನೆಯಿದ್ದರೆ ಅದನ್ನು ದೂರ ಎಸೆಯೋಣ.

ಕೆಲವೊಮ್ಮೆ ನಾವು ಗೊಂದಲಗೊಳ್ಳುವ ಪರಿಸ್ಥಿತಿಯಲ್ಲಿರುತ್ತೇವೆ. ಕೆಲಸದ ಅಥವ ಮತ್ತಾವುದೋ ಒತ್ತಡವು ನಮ್ಮನ್ನು ಅಸಹಾಯಕರನ್ನಾಗಿಸಬಹುದು. ನಾವು ಜ್ಯೋತಿಷಿಯ ಬಳಿಗೆ ಹೋದರೆ ಅವರು 'ಶಾಂತಿ' ಮಾಡಲು ಹೇಳಬಹುದು, ಅಥವ ಅವರು ಹರಳುಗಳನ್ನು ಕೊಡಬಹುದು. ಅವು ದುಬಾರಿಯಾಗುವುದರಿಂದ ಮತ್ತು ಕೆಲವೊಮ್ಮೆ ಪ್ರಯೋಜನಕ್ಕೆ ಬಾರದಿರುವುದರಿಂದ ನಾವು ಅವುಗಳ ಹಿಂದೆ ಹೋಗುವುದು ಬೇಡ. ಅತ್ಯುತ್ತಮ ಸಲಹೆಗಾರ ನಮ್ಮೊಳಗೇ ಇದ್ದಾನೆ. ಸಲಹೆ ಮಾತ್ರವಲ್ಲದೆ ಸಹಾಯ ಕೂಡ ಸಿಗುತ್ತದೆ. ಅಂತಹ ಪರಿಸ್ಥಿತಿಯಲ್ಲಿದ್ದಾಗ ನಾನು ಮಾರ್ಗದರ್ಶನವನ್ನು ಪಡೆದಿದ್ದೇನೆ. ನಾನು ಸಂಪೂರ್ಣವಾಗಿ ಗೊಂದಲದಲ್ಲಿದ್ದುದಷ್ಟೇ ಅಲ್ಲ ಅಸಹಾಯಕನಾಗಿದ್ದೆ ಮತ್ತು ಹತಾಶನಾಗಿದ್ದೆ. ಆಗ ನಾನು ಮಾಡಿದ್ದೇನೆಂದರೆ, ನನ್ನ ಗುರುವನ್ನು ಪ್ರಾರ್ಥಿಸಿದೆ, ಋಷಿಗಳನ್ನು ಸಂಪರ್ಕಿಸಿದೆ ಮತ್ತು ಸಿದ್ಧತೆ ಮಾಡಿಕೊಂಡೆ. ಮಾನವ ಮಟ್ಟದ ಪ್ರಯತ್ನಗಳನ್ನು ಕೂಡ ಮಾಡಿದೆ. ಅದು ಕೂಡ ಮುಖ್ಯ. ನಾವು ಮೌನದಲ್ಲಿ ಕುಳಿತು ಆದ್ಯತೆಯನ್ನು ನಿರ್ಧರಿಸಬೇಕು. ಆದ್ಯತೆ ಬಹಳ ಮುಖ್ಯ. ನನಗೆ 10 ಸಮಸ್ಯೆಗಳಿದ್ದರೆ, ಆ ಎಲ್ಲ 10 ಸಮಸ್ಯೆಗಳಿಗೂ ಈ ದಿನವೇ ಒಮ್ಮೆಗೇ ಗಮನ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಪ್ರಥಮ ಆದ್ಯತೆಗೆ ನಾನು ಮೊದಲಿಗೆ ಗಮನ ಕೊಡಬೇಕು. ಈ ಸಮಯದಲ್ಲಿ ನನ್ನ ಸ್ನೇಹಿತನೊಬ್ಬನ ನೆನಪಾಗುತ್ತಿದೆ. ನಾನು ಕಚೇರಿಗೆ ಸೇರಿದಾಗ ಮಹತ್ವವಾದುದೊಂದನ್ನು ಅವನು ಕಲಿಸಿಕೊಟ್ಟ. ಆತ ಹೇಳಿದ, "ನೀವು ಮೊದಲ ಬಾರಿಗೆ ಬ್ಯಾಂಕ್ ಅಥವ ಪೋಸ್ಟ್ ಆಫೀಸ್ ಕೌಂಟರ್‌ನಲ್ಲಿ ಕುಳಿತಾಗ ಸರತಿಯ ಸಾಲಿನಲ್ಲಿ 20 ಜನರು ನಿಂತಿರುವುದನ್ನು ಕಂಡು ಗಾಬರಿಯಾಗಬಹುದು. ನೀವು ಈ ಜನರ ಕಡೆ ನೋಡುವುದು ಬೇಡ. ಒಂದು ಸಲಕ್ಕೆ ನೀವು ಒಬ್ಬರಿಗೆ ಮಾತ್ರ ಸೇವೆ ಸಲ್ಲಿಸುತ್ತಿರುತ್ತೀರಿ, ಅದರ ಅರ್ಥ ನಿಮ್ಮ ಮುಂದೆ ಒಬ್ಬರು ಮಾತ್ರ ಇದ್ದಾರೆ. ಆದ್ದರಿಂದ ಅವರೊಬ್ಬರ ಕೆಲಸವನ್ನು ಮಾಡಿ ಮಿಕ್ಕವರನ್ನು ಮರೆತುಬಿಡಿ. ಯಾವುದೇ ಒಂದು ಸಮಯದಲ್ಲಿ ಒಬ್ಬರ ಕೆಲಸವನ್ನಷ್ಟೇ ಮಾಡುತ್ತಿರುತ್ತೇವೆ." ಆದ್ದರಿಂದ ನೀವು ಆದ್ಯತೆಯ ಮೇಲೆ ಕೆಲಸ ಮಾಡಲು ಪ್ರಾರಂಭಿಸಿ, ದಾರಿ ಕಂಡುಕೊಳ್ಳುತ್ತೀರಿ. 'ನಿಮಗೆ ಗೊಂದಲವಿದ್ದರೆ, ನಿಮ್ಮ ಬದುಕಿಗೆ ಗುರಿಯಿಲ್ಲದಿದ್ದರೆ... ನೀವು ನಿಮ್ಮ ಪರಿಸರವನ್ನು ಶುದ್ಧವಾಗಿಟ್ಟುಕೊಳ್ಳಿ ಸಾಕು, ಅದು ನಿಮಗೆ ಶಕ್ತಿ ತುಂಬುತ್ತದೆ,' ಎಂದು ನಾನು ಹೇಳಿದರೆ, ನೀವು ನನ್ನ ಬಗ್ಗೆ ಹಾಸ್ಯ ಮಾಡಬಹುದು. ಅದು ಹೇಗೆ ಸಾಧ್ಯ? ಎಂದು ಕೇಳಬೇಡಿ. ಆದರೆ ಅದು ಸಂಭವಿಸುತ್ತದೆ. ನಿಮ್ಮ ಮೇಜನ್ನು ಯಾವಾಗಲೂ ಸುವ್ಯವಸ್ಥಿತವಾಗಿಡಿ, ನಿಮ್ಮ ಕೊಠಡಿಯನ್ನು ಸುಂದರವಾಗಿಡಿ, ವಸ್ತುಗಳೆಲ್ಲವನ್ನೂ ಅಚ್ಚುಕಟ್ಟಾಗಿ ಇಡಿ. ನಂತರ ಅಲ್ಲಿ ನಮಗೆ ಒಳ್ಳೆಯ ವಿಚಾರಗಳು ಹೊಳೆಯುತ್ತವೆ, ಕಾರ್ಯ ಕೈಗೂಡುತ್ತದೆ! ಈ ವಿಶ್ವದಲ್ಲಿ ಒಂದು ರೀತಿಯ ಸಂಘಟನೆಯಿದ್ದು, ಈ ವ್ಯವಸ್ಥಿತ ವಿಧಾನವು ಯಾವುದೇ ಪರಿಸ್ಥಿತಿ ಅಥವ ಸಮಸ್ಯೆಯನ್ನು ನಿಭಾಯಿಸಲು ನಮಗೆ ಸಹಾಯ ಮಾಡಬಹುದು. ಇದೊಂದು ಮೂರ್ಖತನದ ವಿಚಾರವೆಂದು ಅನಿಸಬಹುದಾದರೂ ಒಮ್ಮೆ ಪ್ರಯತ್ನಿಸಿ ನೋಡಿ, ಕಳೆದುಕೊಳ್ಳುವುದು ಏನೂ ಇಲ್ಲ ಮತ್ತು ನೀವು ಜ್ಯೋತಿಷಿಯ ಬಳಿಗೆ ಹೋಗಬೇಕಾಗಿಲ್ಲ!

ಕಳೆದ ಶುಕ್ರವಾರದಂದು 'ಶುಕ್ರವಾರದ ಸತ್ಸಂಗ'ದ ಧ್ಯಾನ ಮಾಡುತ್ತಿದ್ದಾಗ ಸ್ವಲ್ಪ ಮಟ್ಟಿಗೆ ನನ್ನ ಶಾಂತಿ ಕದಡಿತು. ಹೊರಗಡೆ ಜಗಳವಾಗುತ್ತಿದ್ದುದರಿಂದ, ಅದರಲ್ಲಿ ನಮ್ಮ ಜನರೇನಾದರೂ ಭಾಗಿಯಾಗಿದ್ದಾರೆಯೇ ಎಂದು ನೋಡುವುದಕ್ಕಾಗಿ ನಾನು ಹೊರಬಂದೆ. ನಂತರ ಹಿಂತಿರುಗಿ ಬಂದು ಧ್ಯಾನ ಮಾಡಲಾರಂಭಿಸಿದೆ. ನಾನು ಧ್ಯಾನದ ಮಧ್ಯದಲ್ಲಿ ಹೊರಗೆ ಹೋಗಿ ಬಂದರೂ ಧ್ಯಾನ ಅದ್ಭುತವಾಗಿತ್ತು. ಈ 'ಶುಕ್ರವಾರದ ಸತ್ಸಂಗ'ದ ಚಟುವಟಿಕೆ ಎಷ್ಟೊಂದು ತೃಪ್ತಿಯನ್ನು ತರುತ್ತಿದೆಯಲ್ಲ ಎಂದು ಯೋಚಿಸಿದೆ. ಜನರು ದೇವರುಗಳಂತೆ ಕುಳಿತು ಧ್ಯಾನಮಾಡುತ್ತಿದ್ದುದು ಅತ್ಯಂತ ತೃಪ್ತಿ ತರುವ ಮತ್ತು ಸಂತೋಷ ತರುವ ನೋಟವಾಗಿತ್ತು.

ನಮ್ಮ ಧ್ಯಾನದ ವಿದ್ಯಾರ್ಥಿಯಲ್ಲದ ಹೊಸಬರೊಬ್ಬರಿಂದ ನನಗೆ ದೂರವಾಣಿ ಕರೆ ಬಂತು. ಅವರು ಹೇಗೋ ನಮ್ಮ ವಾರ್ತಾಪತ್ರಿಕೆಯ 'Reflections' ಅಂಕಣವನ್ನು ಓದಿ ನನಗೆ ಸಂಪರ್ಕಗೊಂಡಿದ್ದರು. ಸಾಮಾನ್ಯವಾಗಿ ನಾನು ಜನರಿಗೆ ದೂರವಾಣಿಯ ಮೂಲಕ ಸಿಗುವುದು ಅಪರೂಪ. 'Reflections' ಅನ್ನು ಎಷ್ಟೊಂದು ಚೆನ್ನಾಗಿ ಬರೆದಿದ್ದೀರಿ!" ಎಂದು ಅವರು ಹೇಳಿದರು. ನನಗೂ ಸಂತೋಷವಾಯಿತು. ಇದನ್ನು ನಮ್ಮ ಜನರೇ ಗುರುತಿಸಿದ್ದರೆ ಇನ್ನೂ ಹೆಚ್ಚು ಸಂತೋಷವಾಗುತ್ತಿತ್ತು. ವಾಸ್ತವದಲ್ಲಿ ಹೊಗಳಿಕೆಯನ್ನಲ್ಲದಿದ್ದರೂ, ಸಾಮಾನ್ಯಕ್ಕಿಂತಲೂ ಭಿನ್ನವಾದ ಅಭಿಪ್ರಾಯಕ್ಕಾಗಿ ನಾನು ಕಾಯುತ್ತಿದ್ದೆ.

ಒಚಿದು ಸ್ಪಷ್ಟನೆ – ನಾವು ಲೌಕಿಕ ಮತ್ತು ಆಧ್ಯಾತ್ಮಿಕ ಪ್ರಪಂಚಗಳ ಬಗ್ಗೆ ಮಾತನಾಡಿದಾಗಲೆಲ್ಲಾ, ಈ ಎರಡೂ ಪ್ರಪಂಚಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಒತ್ತಿ ಹೇಳುತ್ತೇವೆ. ಈ ಲೌಕಿಕ ಪ್ರಪಂಚದಲ್ಲಿ ಸೋಲು ಕಂಡ ಮಾತ್ರಕ್ಕೇ ನೀವು ಅಪ್ರಯೋಜಕ ವ್ಯಕ್ತಿಯೆಂದೇನೂ ಅಲ್ಲ; ಕೆಲವೊಮ್ಮೆ ಇಲ್ಲಿ ಸೋತವರು ಆಧ್ಯಾತ್ಮಿಕ ಪ್ರಪಂಚದಲ್ಲಿ ಗೆಲುವನ್ನು ಕಂಡಿದ್ದಾರೆ. ಲೌಕಿಕ ಮತ್ತು ಆಧ್ಯಾತ್ಮಿಕಗಳೆರಡಕ್ಕೂ ಪ್ರಾಮುಖ್ಯತೆ ಕೊಡುವುದಕ್ಕೆ ಇಲ್ಲಿ ಒತ್ತು ಕೊಡುತ್ತೇವೆ ಎನ್ನುವುದು ಸ್ಪಷ್ಟವಾಗಿದೆ. ಕೆಲವೊಮ್ಮೆ ಜನರು ಆಧ್ಯಾತ್ಮಿಕ ಭಾಗಕ್ಕೆ ಮಾತ್ರವೇ ಪ್ರಾಮುಖ್ಯತೆ ಕೊಟ್ಟು ಲೌಕಿಕ ಭಾಗವನ್ನು ಕಡೆಗಣಿಸುವುದನ್ನು ನಾನು ನೋಡಿದ್ದೇನೆ; ಅದು ಋಷಿಗಳ ವಿಧಾನವಲ್ಲ.

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಜೂನ್ 2019

ಕೆಲವೊಮ್ಮೆ ನಾವು ಸ್ವ–ನಿಂದನೆಯ ಪ್ರಕ್ರಿಯೆಯಲ್ಲಿ ತೊಡಗಿರುತ್ತೇವೆ. ನಮ್ಮ ಹಿಂದಿನ ಕಾರ್ಯಗಳ ಬಗ್ಗೆ ತಪ್ಪಿತಸ್ಥ ಭಾವನೆಯನ್ನು ಅಥವ ಪಾಪ ಪ್ರಜ್ಞೆಯನ್ನು ಬಹಳವಾಗಿ ನಮ್ಮಲ್ಲಿ ಹೊಂದಿರುತ್ತೇವೆ, 'ನಾನು ಬಹಳ ಕೆಟ್ಟ ಮನುಷ್ಯ, ನಾನು ಹಾಗೆ ಮಾಡಬಾರದಾಗಿತ್ತು,' ಎಂದು ಹೇಳುತ್ತೇವೆ. ಈ ರೀತಿಯ ಭಾವನೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಗುರೂಜಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದರು. ನಾವು ತಪ್ಪು ಮಾಡಿರಬಹುದು. ನಾವು ಯಾರೂ ಪರಿಪೂರ್ಣರಲ್ಲ, ತಪ್ಪುಗಳನ್ನು ಮಾಡುತ್ತೇವೆ. ಸ್ವಲ್ಪಮಟ್ಟಿಗಿನ ತಪ್ಪಿತಸ್ಥ ಭಾವನೆ ಹೊಂದಿರುವುದು ಮಾನವ ಸಹಜ. ಅದು ನಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತದೆ. ಪಶ್ಚಾತ್ತಾಪ ಪಡಬೇಕು ಆದರೆ ನಮ್ಮನ್ನೇ ನಿಂದಿಸಿಕೊಳ್ಳದಂತೆ ಎಚ್ಚರ ವಹಿಸಬೇಕು. ಯಾವುದೇ ರೀತಿಯ ಅತೀರೇಕವನ್ನು ತಪ್ಪಿಸಬೇಕು. ನಮ್ಮ ತಪ್ಪನ್ನು ಒಪ್ಪಿಕೊಳ್ಳುವುದು ಅತಿ ಮುಖ್ಯ. ಹಾಗೆ ಒಪ್ಪಿಕೊಳ್ಳಲು ಸಾಧ್ಯವಾದರೆ, ಮುಂದೆ ಹೋಗಲು ನಾವು ಒಂದು ದೊಡ್ಡ ಹೆಜ್ಜೆಯಿಟ್ಟಂತೆ. ನಂತರದ ಒಂದು ದೊಡ್ಡ ಹೆಜ್ಜೆಯೆಂದರೆ ನಮ್ಮನ್ನೇ ಕ್ಷಮಿಸಿಕೊಳ್ಳುವುದು. ಆ ತಪ್ಪುಗಳನ್ನು ಪುನಃ ಮಾಡದಿರುವುದು ಅತಿ ಮುಖ್ಯ. ಅದು ಮುಂದೆ ಹೋಗಲು ಇಡುವ ಮತ್ತೊಂದು ದೊಡ್ಡ ಹೆಜ್ಜೆ. ಅದೇ ತಪ್ಪುಗಳು ಮುಂದುವರೆದರೆ ನಮಗೆ ನಮ್ಮ ತಪ್ಪಿನ ಅರಿವಾಗಿಲ್ಲವೆಂದು ಅರ್ಥ ಮಾಡಿಕೊಳ್ಳಬೇಕು. ನಮಗೆ ಅರಿವಾಗಿರಬಹುದಾದರೂ ಅದನ್ನು ನಾವು ಒಪ್ಪಿ ಕೊಂಡಿಲ್ಲವೆನ್ನುವುದೂ ಅದರ ಅರ್ಥ. ಆದ್ದರಿಂದ ಸ್ವ–ನಿಂದನೆಯಿಂದ ಪ್ರಯೋಜನವಿಲ್ಲ. ನಾವು ಬೆಳಕಿನ ಒಂದು ಭಾಗ. ನಾವು ಪಾಪಿಗಳಲ್ಲ.

ನಮಗೆ ನಮ್ಮ ತಪ್ಪಿನ ಅರಿವಾಗಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸಿದರೆ ಮತ್ತು ಅದೇ ತಪ್ಪನ್ನು ಪುನಃ ಮಾಡದಿದ್ದರೆ ಆ ತಪ್ಪಿಗೆ ಸಂಬಂಧಿಸಿರುವ ಕರ್ಮಗಳು ನಿವಾರಣೆಯಾಗುತ್ತವೆ ಎಂದು ಗುರೂಜಿಯವರು ಹೇಳಿದ್ದರು. ದೇವರೆಷ್ಟು ದಯಾಳು ಎಂದು ಇದರಿಂದ ತಿಳಿಯುತ್ತದೆ. ಬಹುಶಃ ನಮ್ಮನ್ನು ಮನ್ನಿಸದಿರುವುದು ಮಾನವರು ಮಾತ್ರವೆಂದು ನನಗನ್ನಿಸುತ್ತದೆ. ಅವರು ಕೊನೆಯವರೆಗೂ ದ್ವೇಷವನ್ನು ಬಿಡದಿರಬಹುದು. ಆದ್ದರಿಂದ ನಮ್ಮಲ್ಲಿ ಪಾಪಪ್ರಜ್ಞೆ ಕಾಡುತ್ತದೆ. ಅದನ್ನು ನಿಭಾಯಿಸಲು ಋಷಿಗಳಿಂದ ಬಂದ ಈ ಜ್ಞಾನವು ಖಂಡಿತ ಸಹಾಯ ಮಾಡುತ್ತದೆ.

ಒಬ್ಬ ವ್ಯಕ್ತಿ ಹೇಳಿದರು, "ನಾವು ಋಷಿಗಳ ಜೊತೆಯಲ್ಲಿದ್ದೇವೆ, ನಮ್ಮಲ್ಲಿ ಹೀಲಿಂಗ್ ಚೈತನ್ಯಗಳಿವೆ ಮತ್ತು ಸ್ವ–ಹೀಲಿಂಗ್ ಕೂಡ ಮಾಡಿಕೊಳ್ಳುತ್ತೇವೆ, ಬೇರೆಯವರಿಗೂ ಹೀಲಿಂಗ್ ಚೈತನ್ಯಗಳನ್ನು ಕಳಿಸುತ್ತೇವೆ. ಹಾಗಿರುವಾಗ ನಾವು ಮತ್ತೊಬ್ಬ ಹೀಲರ್ ಬಳಿಗೆ, ರೇಖಿ ಹೀಲರ್ ಅಥವ ಪ್ರಾಣಿಕ್ ಹೀಲರ್ ಅಥವ ಜ್ಯೋತಿಷಿಯ ಬಳಿಗೆ ಹೋಗುವ ಅವಶ್ಯಕತೆಯಿದೆಯಾ?" ಹೀಲರ್ ಬಳಿಗೆ ಅಥವ ಜ್ಯೋತಿಷಿಯ ಬಳಿಗೆ ನಾವು ಹೋಗಬೇಕಾಗಿಲ್ಲವೆಂದು ನಾನು ಅವರಿಗೆ ಹೇಳಿದೆ. ಆದರೆ ಈ ಮಾರ್ಗದ ಧ್ಯಾನಿಯೊಬ್ಬರು ಮತ್ತೊಬ್ಬರ ಬಳಿಗೆ ಹೋಗಿ ಅವರು ಹೇಳಿದ್ದನ್ನು ಅನುಸರಿಸಿದರೆ ಅದರ ಬಗ್ಗೆ ನಾವು ಏನೂ ಹೇಳುವುದಿಲ್ಲ, ಹಾಗು ವಿಮರ್ಶೆ ಮಾಡುವುದಿಲ್ಲ ಕೂಡ. ಯಾರೊಬ್ಬರ ಬಳಿಗೆ ಹೋಗಲು ವ್ಯಕ್ತಿಯೊಬ್ಬನಿಗೆ ಪೂರ್ಣ ಸ್ವಾತಂತ್ರವಿರಬೇಕು. ಬೇರೆ ಮಾರ್ಗಗಳನ್ನು ಒಳಹೊಕ್ಕು ನೋಡಲು, ಸಮಸ್ಯೆಗಳನ್ನು ಪರಿಹರಿಸಲು ಮತ್ತು ಹೀಲಿಂಗ್ ಮಾಡಲು, ಇತರ ವಿಧಾನಗಳನ್ನು ಪ್ರಯತ್ನಿಸಲು, ವ್ಯಕ್ತಿಯೊಬ್ಬನಿಗೆ ಸ್ವಾತಂತ್ರವಿರಬೇಕು. ಅವನಿಗೆ ಈ ಮಾರ್ಗ ಸರಿಯೆನಿಸಿದರೆ ಸಾಧನೆಯನ್ನು ಇಲ್ಲಿಯೇ ಮುಂದುವರಿಸಲಿ. ಮತ್ತೊಂದು ಮಾರ್ಗ ಸೂಕ್ತವೆನಿಸಿದರೆ ಅಲ್ಲಿ ಸಾಧನೆ ಮಾಡಲಿ. ಸಾಮಾನ್ಯವಾಗಿ ಇದರ ಬಗ್ಗೆ ನಾವು ಏನೂ ಹೇಳುವುದಿಲ್ಲ, ಆದರೆ ಈ ವ್ಯಕ್ತಿ ಈ ವಿಷಯದ ಬಗ್ಗೆ ಕೇಳಿದ್ದರಿಂದ, ನಾವು ಬೇರೆ ಹೀಲರ್‌ಗಳ ಬಳಿಗೆ ಹೋಗಬೇಕಾಗಿಲ್ಲವೆಂದು ಅವರಿಗೆ ಹೇಳಿದೆ.

ನಾವು ಋಷಿಗಳೊಂದಿಗಿದ್ದೇವೆ, ಋಷಿಗಳು ದೇವರಿದ್ದಂತೆಯೇ. ಅವರಿಗಿಂತ ಉನ್ನತವಾದ ಶಕ್ತಿಯಿದೆಯೇ? ಅದು ಸಾಧ್ಯವಿಲ್ಲ. ನಮ್ಮ ಸಮಸ್ಯೆಯನ್ನು ಅವರ ಮುಂದಿಡುತ್ತೇವೆ ಮತ್ತು ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಮಾನವ ಮಟ್ಟದ ನಮ್ಮ ಪ್ರಯತ್ನಗಳನ್ನು ಮುಂದುವರೆಸುತ್ತೇವೆ. ಉದಾಹರಣೆಗೆ, ನಮಗೆ ಆರೋಗ್ಯದ ಸಮಸ್ಯೆಯಿದ್ದರೆ ಅದನ್ನು ಋಷಿಗಳ ಮುಂದಿಡುತ್ತೇವೆ. ಸ್ವ–ಹೀಲಿಂಗ್ ಅನ್ನೂ ಮಾಡಿಕೊಳ್ಳುತ್ತೇವೆ. ವೈದ್ಯರ ಬಳಿಗೆ ಹೋಗಿ ಔಷಧಿಯನ್ನೂ ತೆಗೆದುಕೊಳ್ಳುತ್ತೇವೆ. ಇಲ್ಲಿ ಋಷಿಗಳು ಅತ್ಯದ್ಭುತವಾದ ಹೀಲಿಂಗ್ ಚೈತನ್ಯಗಳನ್ನು ಸಂಗ್ರಹಿಸಿಟ್ಟಿರುವುದು ನಮಗೆ ತಿಳಿದಿದೆ. ಅದನ್ನು ಬಳಸಿಕೊಳ್ಳಲು ನಮಗೆ ಅವಕಾಶವಿದೆ. ಈ ಎಲ್ಲ ಸಹಾಯಗಳನ್ನು ನಾವು ಬಳಸಿಕೋಳ್ಳುತ್ತೇವೆ. ನಂತರ ಅದರ ಫಲಿತಾಂಶವನ್ನು ದೇವರ ಇಚ್ಛೆಯೆಂದು ಸ್ವೀಕರಿಸುತ್ತೇವೆ. ಆದರೆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸುವುದಿಲ್ಲ. ಆಧ್ಯಾತ್ಮಿಕ ಮಟ್ಟ ಮತ್ತು ಮಾನವ ಮಟ್ಟಗಳಲ್ಲಿನ ಪ್ರಯತ್ನಗಳನ್ನು ಮುಂದುವರೆಸುತ್ತೇವೆ. ಇದೊಂದು ಆಧ್ಯಾತ್ಮಿಕ ವಿಧಾನ, ಸಮತೋಲನದ ವಿಧಾನ.

ನಾನು ಆಗಲೇ ಹೇಳಿದ ಹಾಗೆ, ನಾವು ಇಲ್ಲಿನ ಹೀಲಿಂಗ್ ಚೈತನ್ಯಗಳನ್ನು ಬಳಸಿಕೊಂಡರೆ ಮತ್ತೊಬ್ಬ ಹೀಲರ್ ಬಳಿಗೆ ಹೋಗಬೇಕಾಗಿಲ್ಲ. ನಾವು ಬೇರೆ ಬೇರೆ ವೈದ್ಯರ ಬಳಿಗೆ ಹೋದರೆ ಬೇರೆ ಬೇರೆ ಔಷಧಿಗಳನ್ನು ಕೊಡುತ್ತಾರೆ. ಆ ಎಲ್ಲ ವೈದ್ಯರುಗಳು ಕೊಟ್ಟ ಔಷಧಿಗಳನ್ನು ನಾವು ಏಕಕಾಲದಲ್ಲಿ ತೆಗೆದುಕೊಳ್ಳಲು ಆಗುವುದಿಲ್ಲ. ಅದು ಮಿತಿ ಮೀರಿದ ಔಷಧವಾಗುತ್ತದೆ. ಅದರಿಂದ ಪ್ರಯೋಜನವಾಗುವುದಿಲ್ಲ. ನಮ್ಮ ದೇಹಕ್ಕೆ ಅದನ್ನು ತಡೆಯುವ ಶಕ್ತಿಯಿಲ್ಲ. ಅದೇ ರೀತಿ ವಿವಿಧ ಪದ್ಧತಿಗಳಿಂದ ಏಕಕಾಲದಲ್ಲಿ ಹೀಲಿಂಗ್ ಪಡೆಯುವುದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಯಾವುದೇ ಒಂದು ಪದ್ಧತಿಯಲ್ಲಿ ನಮಗೆ ನಂಬಿಕೆ ಇಲ್ಲವೆನ್ನುವುದನ್ನು ಕೂಡ ಇದು ತೋರಿಸುತ್ತದೆ. ನಂಬಿಕೆ, ಹೀಲಿಂಗ್‌ನ ಒಂದು ಮುಖ್ಯ ಭಾಗ. ಹೀಲಿಂಗ್ ಚೈತನ್ಯಗಳನ್ನು ನಮ್ಮ ವ್ಯವಸ್ಥೆ ಸ್ವೀಕರಿಸಬೇಕು. ಹೀಲಿಂಗ್ ಚೈತನ್ಯಗಳನ್ನು ಒಪ್ಪಿಕೊಂಡು ನಾವು ಸ್ವೀಕರಿಸದಿದ್ದರೆ ಅವು ನಮ್ಮನ್ನು ಪ್ರವೇಶಿಸುವುದಿಲ್ಲ. ಹೀಲಿಂಗ್ ಚೈತನ್ಯಗಳು ಕೂಡ ನಮಗೆ ಸ್ವಾತಂತ್ರ್ಯವನ್ನು ಕೊಡುತ್ತವೆ. ಯಾವುದನ್ನೂ ನಮ್ಮ ಮೇಲೆ ಹೇರುವುದಿಲ್ಲ. ನಮ್ಮಲ್ಲಿ ಗೊಂದಲವಿದ್ದು ಚೈತನ್ಯಗಳನ್ನು ನಾವು ಸ್ವೀಕರಿಸಿದರೂ ಕೂಡ, ಅನೇಕ ವಿಧಾನಗಳ ಹೀಲಿಂಗ್‌ಅನ್ನು ಪಡೆದುಕೊಳ್ಳಲು ನಾವು ಪ್ರಯತ್ನಿಸಿದಾಗ, ನಮ್ಮ ಶಾರೀರಿಕ ವ್ಯವಸ್ಥೆಗೆ ಆ ಚೈತನ್ಯಗಳನ್ನು ಸರಿಯಾಗಿ ಹೀರಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ನನಗೆ ಅನಿಸುತ್ತದೆ. ನಂಬಿಕೆಯಿಲ್ಲದಿದ್ದಾಗ ಸಂಪೂರ್ಣ ಒಪ್ಪಿಗೆಯಿರುವುದಿಲ್ಲ, ಆಗ ಚೈತನ್ಯಗಳು ಒತ್ತಾಯ ಪೂರ್ವಕವಾಗಿ ನಮ್ಮನ್ನು ಪ್ರವೇಶಿಸಲು ಆಗುವುದಿಲ್ಲ. ಆದುದರಿಂದ ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಚೈತನ್ಯಗಳು ಸರಿಯಾಗಿ ಸಮೀಕರಣಗೊಳ್ಳದಿದ್ದಾಗ ಸಹಜವಾಗಿಯೇ ಅದು ಪರಿಣಾಮ ಬೀರುವುದಿಲ್ಲ. ಆದ್ದರಿಂದ, ಒಂದು ವ್ಯವಸ್ಥೆಯ ಮೇಲೆ ನಂಬಿಕೆ ಇಡುವುದು ಪ್ರಯೋಜನಕಾರಿ.

ಕೆಲವೊಮ್ಮೆ ಜನರು ಬಲವಾದ ಭರವಸೆಯನ್ನು ಹೊಂದಿ ನನಗೆ ಪತ್ರ ಬರೆಯುತ್ತಾರೆ. ಅವರು ಬಹಳ ಕಷ್ಟಕರವಾದ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ, ಬಹಳ ಯಾತನೆಯಲ್ಲಿರುತ್ತಾರೆ. ಕೆಲವರು ಸಂಪೂರ್ಣ ನಿರಾಶೆಯ ಸ್ಥಿತಿಯಲ್ಲಿರುವಂತೆ ಕಾಣುತ್ತಿರುತ್ತದೆ. ಋಷಿಗಳು ಯಾವಾಗಲೂ ಸಹಾಯ ಮಾಡುತ್ತಾರೆ ಎಂಬ ಆಶ್ವಾಸನೆ ನೀಡುವ ಪತ್ರವನ್ನು ಬರೆದು ಅವರಿಗೆ ಸಾಂತ್ವನ ಹೇಳಲು ಪ್ರಯತ್ನಿಸುತ್ತೇನೆ; ಭರವಸೆಯನ್ನು ಕಳೆದುಕೊಳ್ಳಬೇಡಿ ಮತ್ತು ಧ್ಯಾನವನ್ನು ಬಿಡಬೇಡಿ ಎಂದು ಕೋರುತ್ತೇನೆ. ಧ್ಯಾನ ಆಶ್ಚರ್ಯಕರ ಫಲಿತಾಂಶಗಳನ್ನು ತರುತ್ತದೆ. ಕೆಲವೊಮ್ಮೆ ಹೆಚ್ಚು ಸಮಯ ಹಿಡಿಯಬಹುದು. ನಾವು ಕಾಯಬೇಕು, ತಾಳ್ಮೆಯಿರಬೇಕು. ನನ್ನ ಮಾತುಗಳು ಎಷ್ಟರಮಟ್ಟಿಗೆ ಸಹಾಯಮಾಡುತ್ತದೋ ನನಗೆ ಗೊತ್ತಿಲ್ಲ. ಜನರು ಒಂದು ರೀತಿಯ ಪರಿಹಾರವನ್ನು (relief) ನಿರೀಕ್ಷಿಸುತ್ತಿರುತ್ತಾರೆ. ಪರಿಹಾರ, ನಿಜವಾದ ಪರಿಹಾರವಷ್ಟೇ ನಮಗೆ ನೆರವಾಗುವುದು. ಆದ್ದರಿಂದ ಮಾತಷ್ಟೇ ಸಾಕಾಗುವುದಿಲ್ಲ. ಅದು ನನಗೆ ಅರ್ಥವಾಗುತ್ತದೆ. ಆದರೆ ನಾನೇನು ಮಾಡಬಲ್ಲೆ? ನನ್ನಲ್ಲಿ ಮಾಂತ್ರಿಕ ಶಕ್ತಿಗಳಿಲ್ಲ. ನಾನು ನಿಮ್ಮಂತೆಯೇ ಒಬ್ಬ ಸಾಮಾನ್ಯ ಸಾಧಕ. ಆದರೆ ಋಷಿಗಳಿದ್ದಾರೆ. ನಾನು ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತೇನೆ ಮತ್ತು ನೀವೆಲ್ಲರೂ ಮಾಡುವಂತೆಯೇ ನಾನೂ ಬೆಳಕನ್ನು ಕಳಿಸುತ್ತೇನೆ. ಅದೊಂದೇ ಶಕ್ತಿ ನಮ್ಮಲ್ಲಿರುವುದು. ಆದರೆ ಎಲ್ಲಕ್ಕಿಂತ ಶಕ್ತಿಶಾಲಿ. ಅದು ಯಾವಾಗಲೂ ಪರಿಣಾಮ ಕಾರಿಯಾಗಿ ಕೆಲಸ ಮಾಡುತ್ತದೆ. ನಾನು ಆಗಲೇ ಹೇಳಿದ ಹಾಗೆ, ಕೆಲವೊಮ್ಮೆ ಅದು ಸಮಯ ತೆಗೆದುಕೊಳ್ಳಬಹುದು, ಆದರೆ ಖಂಡಿತವಾಗಿಯೂ ಪರಿಹಾರ ಸಿಗುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆ ಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಜೊತೆಗಿನ ಪಯಣ

ಗುರೂಜಿ ಕೃಷ್ಣಾನಂದ; ಅನು: ಸುಜಾತ ವಿ

ಆರು

('ಮಾನಸ ಪತ್ರ'ದ 1990ರ ಮಾರ್ಚ್ ಮತ್ತು ಏಪ್ರಿಲ್ ಸಂಚಿಕೆಯಿಂದ)

ಅಮರರವರನ್ನು ಭೇಟಿಮಾಡಿದ ಕೆಲವು ತಿಂಗಳಲ್ಲಿ, ಅವರ ಮನೆಯ ಮಾಲೀಕರ ಕೋರಿಕೆಯ ಮೇರೆಗೆ ಅವರು ತಮ್ಮ ಮನೆಯನ್ನು ಬದಲಾಯಿಸಬೇಕಾಗಿಬಂತು. ಹೆಚ್ಚು ಕಷ್ಟಪಡದೆ ಇನ್ನೂ ವಿಶಾಲವಾದ ಮನೆಯೊಂದು ದೊರಕಿತು. ಅದನ್ನು ನಿಗದಿಮಾಡುವ ಮೊದಲು ಋಷಿಗಳಿಂದ ಅನುಮತಿಯನ್ನು ಪಡೆಯಬೇಕೆಂದು ಅವರು ಹೇಳಿದರು. ಇದರ ಅವಶ್ಯಕತೆ ಇದೆಯಾ ಎಂದು ಕೇಳಿದೆ.

"ಖಂಡಿತವಾಗಿ, ಅವರ ಒಪ್ಪಿಗೆ ಇಲ್ಲದೆ ನಾನು ಏನೂ ಮಾಡುವುದಿಲ್ಲ. ನಾನು ಅವರ ಕೆಳಗೆ ಕೆಲಸ ಮಾಡುತ್ತೇನೆ. ನನ್ನ ಇಡೀ ಜೀವನವನ್ನು ಅವರಿಗಾಗಿ ಮುಡಿಪಾಗಿಟ್ಟಿದ್ದೇನೆ. ಅದು ಅವರು ನಡೆಸಿದಂತೆ ನಡೆಯುತ್ತದೆ."

ಅಮರರವರು ತಾವೇ ಋಷಿಗಳಾಗಿದ್ದರು ಎಂದು ನನಗೆ ತಿಳಿದಿತ್ತು. ಹಾಗಿದ್ದ ಮೇಲೆ ಇದರ ಅವಶ್ಯಕತೆ ಇದೆಯಾ?

"ಅದನ್ನು ಆ ರೀತಿ ನೋಡಬಾರದು. ಇಲ್ಲಿ ನನ್ನದು ಕೆಲಸಗಾರನ ಪಾತ್ರ, ನಾನು ಶಿಸ್ತನ್ನು ಪಾಲಿಸಲೇಬೇಕು."

ನಂತರದ ಸಂದರ್ಭಗಳಲ್ಲಿ ಕೂಡ ಇದನ್ನೇ ಹೇಳಿದ್ದರು. ತಾವು ಋಷಿಗಳ ಕೈಯಲ್ಲಿರುವ ಒಂದು ಆಯುಧವೆಂದು ಹೇಳಿಕೊಳ್ಳುತ್ತಿದ್ದರು, ಹಾಗೂ ಆಯುಧವಾಗಿಯೇ ಉಳಿಯುವುದು ಮತ್ತು ಅಹಂಅನ್ನು ನಿಯಂತ್ರಣದಲ್ಲಿ ಇಡುವುದು ಬಹಳ ಕಷ್ಟವೆಂದೂ ಹೇಳಿದರು. ಅವರು ಅಹಂಗೆ ತನ್ನ ಹೆಡೆ ಎತ್ತಲು ಅವಕಾಶ ಕೊಟ್ಟಿದ್ದನ್ನು ನಾನು ನೋಡೇ ಇಲ್ಲ. ನಾನು ಬಹಳವಾಗಿ ಪ್ರಭಾವಿತನಾದದ್ದು ಇದರಿಂದಲೇ. ಬಹಳ ಎತ್ತರಕ್ಕೆ ಬೆಳೆದಿದ್ದ, ಶಕ್ತಿಶಾಲಿ ಮತ್ತು ಮಹಾನ್ ವ್ಯಕ್ತಿಯೊಬ್ಬರಲ್ಲಿ ಎಷ್ಟೊಂದು ವಿನಮ್ರತೆ! ಅವರು ತೀರಿಕೊಂಡ ನಂತರ, ನಾನು ಬಹಳ ಜನರನ್ನು ಭೇಟಿ ಮಾಡಿದ್ದೆ. ಯೋಗಿಗಳು, ಸಂತರುಗಳು, ಗುರುಗಳು... ಆದರೆ ಯಾರೂ ಅವರ ಮಟ್ಟದಲ್ಲಿ ಇರಲಿಲ್ಲ. ಅತಿಯಾದ ಅಹಂನಿಂದಾಗಿ ಅವರು ಕುಬ್ಜರಂತೆ ಮತ್ತು ಆಳವಾದ ಜ್ಞಾನವಿಲ್ಲದವರಂತೆ ಕಾಣುತ್ತಿದ್ದು ಅಗೌರವಕ್ಕೆ ಎಡೆಮಾಡಿಕೊಡುತ್ತಿದ್ದರು.

ನನಗೆ ಅವರು ಆಧ್ಯಾತ್ಮಿಕವಾಗಿ ಎತ್ತರಕ್ಕೆ ಬೆಳೆದ ಏಕೈಕ ವ್ಯಕ್ತಿಯಾಗಿ ಕಾಣಲು ಅವರ ವಿನಮ್ರತೆಯೊಂದೇ ಕಾರಣವಲ್ಲ. ಅವರಲ್ಲಿ ಮಕ್ಕಳಂತೆ ಇರುವ ಮುಗ್ಧತೆ, ಅನುಕಂಪ, ಕಠಿಣ ಜನರೊಂದಿಗಿರುವ ತಾಳ್ಮೆ, ಸದ್ದಿಲ್ಲದ ಸಾಗರದಂತೆ ಗಂಭೀರವಾದ ಪ್ರಶಾಂತತೆ, ಎಲ್ಲರನ್ನು ಗೆದ್ದಿದ್ದ ಅವರ ಪ್ರೀತಿ ಮತ್ತು ಎಲ್ಲರನ್ನು ತಮ್ಮೊಳಗೆ ಸೇರಿಸಿ ಕೊಳ್ಳುವ ಸಾಮರ್ಥ್ಯ... ಹೀಗೆ ಹೇಳುತ್ತಾ ಹೋದರೂ ಅವರ ಸಂಪೂರ್ಣ ಚಿತ್ರಣವನ್ನು ಕೊಡುವುದರಲ್ಲಿ ನಾನು ಸೋಲುತ್ತೇನೆ. ಸೂರ್ಯೋದಯ, ಸೂರ್ಯಾಸ್ತ ಅಥವ ಬೆಳದಿಂಗಳಲ್ಲಿ ಮಿಂದ ಹಿಮಚ್ಛಾದಿತ ಪರ್ವತ ಶಿಖರಗಳನ್ನು ಚಿತ್ರಿಸಲು ಯಾರಿಗೆ ಸಾಧ್ಯ?

ಋಷಿಗಳ ಅನುಮತಿ ಪಡೆದು, ಅಮರರವರು ಬೇರೆ ಮನೆಗೆ ಹೋದರು. ಮನೆಯ ಸುತ್ತಾ ಬಹಳ ಧ್ಯಾನಿಗಳು ಇರಬಹುದೆಂಬ ಕಾರಣದಿಂದ ಋಷಿಗಳು ನನ್ನನ್ನು ಇಲ್ಲಿಗೆ ಕರೆತಂದರು ಎಂದು ಅವರು ಅನೌಪಚಾರಿಕವಾಗಿ ಹೇಳಿದ ಮಾತು ಸತ್ಯವೇ ಆಯಿತು. ನಾವು ಮೂವತ್ತು ಮಂದಿ ಇದ್ದೆವು ನಂತರದಲ್ಲಿ ಇಲ್ಲಿ ನೂರಾರು ಜನ ಸೇರಿದರು.

ಒಂದು ದಿನ ಸಾಯಂಕಾಲ ಅವರೊಬ್ಬರೇ ಮನೆಯ ಮುಂದೆ ಕುಳಿತಿದ್ದನ್ನು ನೋಡಿದೆ. ಅವರು ಆತಂಕದಿಂದ ಮತ್ತು ದುಃಖದಿಂದ ಇದ್ದಂತೆ ಕಾಣುತ್ತಿದ್ದರು. ನನ್ನ ಭಾವನೆಯನ್ನು ಅರಿತು, ಅಮರರವರು ವಿವರಿಸಿದರು.

"ನೋಡಿ, ನಾವು ಎಲ್ಲಾ ವಿಗ್ರಹಗಳನ್ನು ತಂದಿದ್ದೇವೆ. ಆದರೆ ವಿಗ್ರಹಗಳಲ್ಲಿದ್ದ ಶಕ್ತಿಗಳು ಇನ್ನೂ ಹಳೆಯ ಮನೆಯಲ್ಲೇ ಉಳಿದಿವೆ. ಋಷಿಗಳು ಅವುಗಳನ್ನು ಇನ್ನೂ ವರ್ಗಾಯಿಸಬೇಕಿದೆ."

ಅವತ್ತಿನ ದಿವಸ ನನ್ನ ಮಗ ಒಂದು ಕನಸು ಕಂಡ. ಅವನು ಏಳು ನಕ್ಷತ್ರಗಳು ಉತ್ತರದಿಂದ ದಕ್ಷಿಣದ ಕಡೆಗೆ ಹೋಗುವುದನ್ನು ನೋಡಿದ. ನಾನು ಬೆಳಗ್ಗೆ ಅಮರರವರಿಗೆ ಟೆಲಿಫೋನ್ ಮಾಡಿದೆ. ಆ ಶಕ್ತಿಗಳನ್ನು ಹಿಂದಿನ ರಾತ್ರಿ ಋಷಿಗಳು ವರ್ಗಾಯಿಸಿದರೆಂದು ಅವರು ಖಚಿತಪಡಿಸಿದರು. ಅವರು ತುಂಬಾ ಸಂತೋಷವಾಗಿದ್ದರು!

ಮಾನವ ಮಟ್ಟದ ಕಷ್ಟಗಳು ಅನೇಕ ಸಲ ಅವರನ್ನು ತಟ್ಟಿದರೂ ಕೂಡ ಮತ್ತೆ ಯಾವತ್ತೂ ಅವರು ಆತಂಕ ಮತ್ತು ದುಃಖದಿಂದಿದ್ದುದನ್ನು ನಾನು ನೋಡಲಿಲ್ಲ.

ಡ್ರಾಯಿಂಗ್ ರೂಮ್, ಯಾವಾಗಲೂ, ವಿಶೇಷವಾಗಿ ಸಂಜೆಯ ಹೊತ್ತಿನಲ್ಲಿ ಸಾಧಕರಿಂದ ತುಂಬಿರುತ್ತಿತ್ತು. ಕುರ್ಚಿಯಲ್ಲಿ ಕುಳಿತುಕೊಂಡು, ನಮ್ಮ ಮನಸ್ಸಿನಲ್ಲಿರುವ ಸಮಸ್ಯೆಗಳನ್ನು ತೆಗೆದುಹಾಕಿ, ಮೂಲೆಯಲ್ಲಿ ಆಕರ್ಷಕವಾಗಿ ಕುಳಿತಿರುವ ವ್ಯಕ್ತಿಯ ಕಡೆ ಗಮನವನ್ನು ಕೇಂದ್ರೀಕರಿಸುತ್ತಾ ಕಿವಿ ಕೊಟ್ಟು ಅವರು ವೈಭವದಿಂದ ಹೇಳುವ ಪ್ರತಿ ಪದಗಳನ್ನು ಕೇಳಲು ಕಾಯುತ್ತಾ ಕುಳಿತ್ತಿದ್ದೆವು.

ಅಮರರವರು ಎರಡು ಬಾರಿ ಸುತ್ತಾ ನೋಡಿ ಅಸಾಮಾನ್ಯವಾದ ಎತ್ತರದ ಧ್ವನಿಯಲ್ಲಿ ಮಾತನಾಡಿದರು.

"ಐವತ್ತೊಂದು ಸಾವಿರ ವರ್ಷದ ಹಿಂದೆ, ನೀವು ಹೀಗೆ ಇದೇ ಜಾಗದಲ್ಲಿ ಕುಳಿತಿದ್ದಿರಿ ಮತ್ತು ಇಂತಹುದೇ ಪ್ರಶ್ನೆಗಳನ್ನು ಕೇಳಿದ್ದಿರಿ. ಮತ್ತೆ ಇವತ್ತು ಇಲ್ಲಿ ಅದೇ ಅನುಮಾನಗಳು, ಅದೇ ದೌರ್ಬಲ್ಯ ಮತ್ತು ಅದೇ ಸ್ಥಿತಿಯಲ್ಲಿರುವಿರಿ. ಏನೂ ಬದಲಾವಣೆಗಳಾಗಿಲ್ಲ. ಮತ್ತು ಇದು ಎರಡನೇಯ ಬಾರಿ ಅಲ್ಲ! ಪ್ರತಿ 51,000 ವರ್ಷಗಳ ಚಕ್ರದಲ್ಲಿ ನೀವು ಹೀಗೇ ಕುಳಿತ್ತಿದ್ದಿರಿ. ಇದರ ಅಂತ್ಯ ಯಾವಾಗ?"

(ಮುಂದುವರಿಯುವುದು)

# ಪ್ರಶ್ನೋತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಮ್ಮ ಭೂಮಿ ನಾಲ್ಕನೆಯ ಆಯಾಮದ ಒಳಕ್ಕೆ ಚಲಿಸುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಇಂಥ ಸಂದರ್ಭದಲ್ಲಿ ಮಾನವರಾದ ನಮ್ಮಿಂದ ಏನನ್ನು ನಿರೀಕ್ಷಿಸಲಾಗುತ್ತದೆ?**

ಉ: ಭೂಮಿ ನಾಲ್ಕನೇ ಅಥವಾ ಉನ್ನತ ಆಯಾಮದ ಒಳಕ್ಕೆ ಚಲಿಸುತ್ತಿದೆ ಎನ್ನುವುದರ ಅರ್ಥ ಅಲ್ಲಿನ ತರಂಗಾಂತರಗಳು (frequencies) ಸೂಕ್ಷ್ಮ ಮಟ್ಟದ್ದಾಗಿರುತ್ತವೆ ಎಂದು. ನಾವು ಸಹ ನಮ್ಮ ತರಂಗಾಂತರಗಳನ್ನು ಬದಲಾಯಿಸಿ ಕೊಳ್ಳಬೇಕು. ಇದಕ್ಕಾಗಿ ನಾವು ಸೂಕ್ಷ್ಮವಾದ ಭಾವನೆಗಳನ್ನು, ವಿಶಾಲ ಮನೋಭಾವ ಮತ್ತು ಉತ್ತಮ ಆಲೋಚನೆಗಳನ್ನು ಹೊಂದಿರಬೇಕು. ನಮ್ಮ ಸ್ವಂತ ಆಲೋಚನೆಗಳ ಮತ್ತು ನಮ್ಮ ಜೀವನದ ತರಂಗಾಂತರಗಳನ್ನು ಹೆಚ್ಚಿಸಿ ಕೊಳ್ಳಬೇಕು.

**ಪ್ರ: ಒಂದನೇ ಶಂಬಲ ನಿಯಮವನ್ನು ಅಭ್ಯಾಸವಮಾಡುವುದಕ್ಕೆ ಕನಿಷ್ಠ ವಯಸ್ಸು ಎಷ್ಟಿರಬೇಕು?**

ಉ: ಸಾಮಾನ್ಯವಾಗಿ 7 ವರ್ಷಗಳಾಗಿರಬೇಕೆಂದು ನಾವು ಸೂಚಿಸುತ್ತಿದ್ದೆವು. ಕಾರಣ ಅದು ಮಗುವಿಗೆ ತಾನು ಏನು ಮಾಡುತ್ತಿದ್ದೇನೆ ಎಂದು ಅರ್ಥಮಾಡಿ ಕೊಳ್ಳುವ ವಯಸ್ಸು. ಈ ಅಭಿಪ್ರಾಯವನ್ನು ನಾವು ಪರಿಷ್ಕರಿಸಬೇಕಾಗಿದೆ ಎಂದು ನನಗೆ ಅನಿಸುತ್ತಿದೆ. ಶಾಲೆಗೆ ಪ್ರವೇಶ ಪಡೆಯಲು ವಯಸ್ಸನ್ನು ಸೂಚಿಸುವ ಹಾಗೆ, 'ಇಷ್ಟು ವಯಸ್ಸಾಗಿರಬೇಕು,' ಎಂದು ನಾವು ಸಾರ್ವತ್ರೀಕರಣಗೊಳಿಸಿ ಹೇಳುವುದಕ್ಕೆ ಆಗುವುದಿಲ್ಲ.

**ಪ್ರ: ಆತ್ಮಹತ್ಯೆ ಮಾಡಿಕೊಂಡಿದ್ದಕ್ಕಾಗಿ ಜುಡಾಸ್ ಕರ್ಮಗಳನ್ನು ಆಕರ್ಷಿಸಿದನೇ?**

ಉ: ಆತ ಯಾವ ಕರ್ಮಗಳನ್ನೂ ಆಕರ್ಷಿಸುವುದಿಲ್ಲ.

**ಪ್ರ: ಜುಡಾಸ್ ತನ್ನ ಮುಂದಿನ ಜನ್ಮದಲ್ಲಿ ಆಧ್ಯಾತ್ಮಿಕ ಮಾರ್ಗವನ್ನು ಬಿಟ್ಟು ಹೋದನೇ?**

ಉ: ಅವನು ಈಗಲೂ ಸಹ ಕ್ರೈಸ್ತರ ಜೊತೆಯಲ್ಲಿ ಮತ್ತು ಕ್ರೈಸ್ತರಿಗಾಗಿ ಕೆಲಸ ಮಾಡುತ್ತಿದ್ದಾನೆ. ಜುಡಾಸ್ ಆಧ್ಯಾತ್ಮಿಕ ಮಾರ್ಗವನ್ನು ಏಕೆ ಬಿಟ್ಟು ಹೋಗುತ್ತಾನೆ?

**ಪ್ರ: ನಾವು ನಕಾರಾತ್ಮಕತೆಗಳನ್ನು ದೂರವಿಡುವುದು ಹೇಗೆ?**

ಉ: ಕಾಲಕ್ಕೆ ಅನುಗುಣವಾಗಿ ಕಲಿಯುಗದ ಚೈತನ್ಯಗಳು ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳನ್ನು ಸೃಷ್ಟಿಸುತ್ತವೆ. ಅವು ಈ ವಾತಾವರಣದಲ್ಲಿಯೇ ಇರುವುದರಿಂದ, ನಮಗೆ ಅವುಗಳನ್ನು ದೂರವಿಡಲು ಸಾಧ್ಯವಿಲ್ಲ. ನಮಗೆ ಇವು ನಮ್ಮದಲ್ಲ ಎಂಬ ಅರಿವಿದ್ದಾಗ ನಾವು ಅವುಗಳನ್ನು ತಿರಸ್ಕರಿಸಬೇಕು, ನಿರ್ಲಕ್ಷಿಸಬೇಕು. ಬೆಳಕಿನಲ್ಲಿ ಇರುವ ಪ್ರೀತಿಯ ಅನುಭವ ಪಡೆಯಬೇಕು ಮತ್ತು ಯಾವಾಗಲೂ ನಮ್ಮಲ್ಲಿ ಬೆಳಕನ್ನು ಹೊತ್ತಿರಬೇಕು. ಸುವಾಸನೆಯ ರೀತಿಯಲ್ಲಿಯೇ ಪ್ರೀತಿ ಮತ್ತು ಬೆಳಕು ತಮ್ಮಷ್ಟಕ್ಕೆ ತಾವೇ ಹರಡುತ್ತವೆ. ನಕಾರಾತ್ಮಕತೆಗಳನ್ನು ನಿಭಾಯಿಸುವ ಬದಲಾಗಿ, ಈ ರೀತಿಯಲ್ಲಿ ನಾವು ನಕಾರಾತ್ಮಕತೆಯನ್ನು ದೂರವಿಡುತ್ತೇವೆ.

**ಪ್ರ: ಕೆಲವು ಜನರು ಚೈತನ್ಯಗಳನ್ನು ತಿರಸ್ಕರಿಸುವುದಕ್ಕೆ ಕಾರಣ ಅವರಲ್ಲಿರುವ ಅಜ್ಞಾನವೇ?**

ಉ: ಇಲ್ಲ. ಈ ಚೈತನ್ಯಗಳು ಹೊಸ ಯುಗದ ಮಹಾನ್ ಚೈತನ್ಯಗಳೆಂದು ನಮಗೆ ಸಂಪೂರ್ಣವಾಗಿ ಅರಿವಿರುತ್ತದೆ. ಆದರೂ ನಾವು ತಿರಸ್ಕರಿಸುತ್ತೇವೆ.

**ಪ್ರ: ಈ ಚೈತನ್ಯಗಳನ್ನು ಒಪ್ಪಿಕೊಳ್ಳಲು ಬೇಕಾಗುವಷ್ಟು ತರಬೇತಿ ನಮಗೆ ಆಗಿಲ್ಲವೇ?**

ಉ: ಈ ಚೈತನ್ಯಗಳನ್ನು ಒಪ್ಪಿಕೊಳ್ಳಲು ತರಬೇತಿ ಬೇಕಾಗಿಲ್ಲ.

**ಪ್ರ: ಬೆಳಕನ್ನು ಕಳಿಸುವುದು ಮತ್ತು ಬೆಳಕನ್ನು ಚಾನಲ್ ಮಾಡುವುದು, ಇವೆರಡರ ನಡುವೆ ವ್ಯತ್ಯಾಸ ಇದೆಯೇ?**

ಉ: ವ್ಯತ್ಯಾಸ ಇದೆ. ನಾವು ಬೆಳಕನ್ನು ಕಳಿಸುವಾಗ ಒಬ್ಬ ವ್ಯಕ್ತಿಗೆ, ಜನರಿಗೆ ಅಥವಾ ಒಂದು ಸ್ಥಳಕ್ಕೆ ಕಳಿಸುತ್ತೇವೆ. ನಾವು ಬೆಳಕನ್ನು ಚಾನಲ್ ಮಾಡುವಾಗ ಇಡೀ ಪ್ರಪಂಚಕ್ಕೇ ಬೆಳಕನ್ನು ಚಾನಲ್ ಮಾಡುತ್ತೇವೆ.

**ಪ್ರ: ನಾನು ಇಡೀ ದಿನ ಬೆಳಕನ್ನು ಚಾನಲ್ ಮಾಡಬಹುದೇ?**

ಉ: ನಿಮಗದು ಸಾಧ್ಯವಾದರೆ ನೀವೊಬ್ಬ ಮಹಾನ್ ವ್ಯಕ್ತಿ. ನೀವು ಇಡೀ ದಿನ ಲೈಟ್ ಚಾನಲ್ ಮಾಡಬಹುದು.

**ಪ್ರ: ನಮ್ಮ ಆತ್ಮೀಯರು ವಿಷಮ ಸ್ಥಿತಿಗಳಲ್ಲಿ ಇರುವಾಗ ನಾವು ಏನು ಮಾಡಬೇಕು? ನಾವು ಪ್ರಾರ್ಥಿಸಿ ಸುಮ್ಮನಾಗಬೇಕೇ?**

ಉ: ಬೆಳಕನ್ನು ಕಳಿಸಿ. ಬೆಳಕು ಸಹಾಯ ಮಾಡುತ್ತದೆ. ಒಂದು ವೇಳೆ ನೀವು ನಿಜವಾಗಿ ಆ ವ್ಯಕ್ತಿಯ ಯೋಗಕ್ಷೇಮ ಬಯಸುವುದಾದರೆ, ಅವರಿಗೆ ಧ್ಯಾನ ಮಾಡಲು ಹೇಳಿ; ನಮ್ಮ ಮಾರ್ಗದ ಧ್ಯಾನವೇ ಆಗಬೇಕೆಂದಿಲ್ಲ, ಯಾವ ಧ್ಯಾನವಾದರೂ ಸರಿಯೇ.

**ಪ್ರ: ನನ್ನ ಜೀವನದ ಉದ್ದೇಶ (mission) ಏನು?**

ಉ: ನೀವು ಏನನ್ನು ಆಯ್ಕೆ ಮಾಡಿಕೊಂಡಿರುವಿರೋ, ಅದೇ ನಿಮ್ಮ ಜೀವನದ ಉದ್ದೇಶ ಆಗಿರುತ್ತದೆ. ನಾವು ಜನಿಸುವ ಮೊದಲೇ ಕೆಲವು ಉದ್ದೇಶಗಳನ್ನು ಆಯ್ಕೆ ಮಾಡಿಕೊಂಡಿರುತ್ತೇವೆ. ನಮ್ಮಲ್ಲಿ ಬಹುತೇಕರು ಜೀವನೋದ್ದೇಶಗಳನ್ನು ಹೊಂದಿದ್ದಾರೆ. ಹಾಗಿಲ್ಲದಿದ್ದರೆ, ಈಗ ನೀವು ಆಯ್ಕೆ ಮಾಡಿಕೊಳ್ಳಬಹುದು. ಅದೇ ನಿಮ್ಮ ಉದ್ದೇಶ.


**ಪ್ರ: ನಮ್ಮ ಬಹಳಷ್ಟು ಗುರುಗಳು ಅನ್ಯ ಗ್ರಹಗಳ ವ್ಯಕ್ತಿಗಳ ಬಗ್ಗೆ ಮಾತನಾಡುವುದಿಲ್ಲ. ಏಕೆ?**

ಉ: ನಮ್ಮಲ್ಲಿನ ಬಹಳಷ್ಟು ಗುರುಗಳು ಅನ್ಯ ಗ್ರಹಗಳ ವ್ಯಕ್ತಿಗಳ ಬಗ್ಗೆ ಮಾತನಾಡದಿರುವುದಕ್ಕೆ ಕಾರಣವೆಂದರೆ, ಅವರಿಗೆ ಬೇರೆ ಗ್ರಹಗಳ ವ್ಯಕ್ತಿಗಳ ಬಗ್ಗೆ ಅರಿವು ಇರುವುದಿಲ್ಲ. ಅವರಲ್ಲಿ ಬಹುತೇಕರು ಉನ್ನತ ಸ್ತರದ ಮಾಸ್ಟರ್‌ಗಳೊಂದಿಗೆ ಸಂಪರ್ಕ ಪಡೆದಿರುವುದಿಲ್ಲ, ಏಕೆಂದರೆ ಅಲ್ಲಿ ಅವರು ಅಸ್ತಿತ್ವದಲ್ಲಿದ್ದಾರೆ ಎಂದು ಅವರಿಗೆ ತಿಳಿದಿಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಓರಿಯಂಟೇಶನ್ ತರಗತಿಯಲ್ಲಿ ಸವಾಧಿ ಅನುಭವವನ್ನು ಪಡೆಯುವ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದಾಗ ನನ್ನ ಅರಿವು ಹೊಂಬಣ್ಣದ ಬೆಳಕಿನೆಡೆಗೆ ಶಿಫ್ಟ್ ಆಗಿ ಅದು ಅಂತ್ಯವಿಲ್ಲದಂತೆ ವಿಸ್ತರಿಸುತ್ತಾ ಹೋಯಿತು. ಸುತ್ತ ಮುತ್ತ ಆ ಬೆಳಕೇ ಕಂಡುಬಂದು ನಾನು ಅದರಲ್ಲಿ ಕರಗುತ್ತಿರುವಂತೆನಿಸಿತು. ಅಂದಿನಿಂದ ನಾನು ಅತ್ಯಂತ ಸಂತೋಷದಿಂದಿದ್ದು ಅಧ್ಯಾತ್ಮದಲ್ಲಿ ಮುಂದುವರೆಯಲು ನನಗೆ ಹೆಚ್ಚಿನ ಶಕ್ತಿ ಬಂದಿದೆ. ಋಷಿಗಳು, ಗುರೂಜಿ ಹಾಗೂ ಜಯಂತ್‌ಜಿಯವರಿಗೆ, ಈ ಮೈಮರೆಯುವಂತಹ ತಂತ್ರಗಳ ಅನುಭವವನ್ನು ಕೊಟ್ಟಿದ್ದಕ್ಕಾಗಿ ಅತ್ಯಂತ ಕೃತಜ್ಞಳಾಗಿದ್ದೇನೆ.

–ಸುಜಾತ. ಆರ್

ಓರಿಯಂಟೇಶನ್ ತರಗತಿಯಲ್ಲಿ ಮೊದಲೆರಡು ತಂತ್ರಗಳ ಅಭ್ಯಾಸ ಅತ್ಯಂತ ತೀವ್ರವಾಗಿತ್ತು. ಅದು ಆಳವಾದ ನಿದ್ರೆಯಂತೆನಿಸಿದರೂ ಅದು ನಿದ್ರೆಯಾಗಿರಲಿಲ್ಲ. ಸಮಾಧಿಯ ಅಭ್ಯಾಸ ಕೂಡ ಅತ್ಯಂತ ತೀವ್ರವಾಗಿತ್ತು. ಮೊಟ್ಟ ಮೊದಲ ಬಾರಿಗೆ ನಾನು ವಿಸ್ತಾರತೆಯ ಅನುಭವ ಪಡೆದೆ. ತರಗತಿಯ ನಂತರ, ಅತಿ ಹೆಚ್ಚಾಗಿ ಪಡೆದ ಚೈತನ್ಯಗಳ ಪ್ರಭಾವದಿಂದಾಗಿ ನಾನು ನಾಲ್ಕು ಗಂಟೆಗಳ ಕಾಲ ದೀರ್ಘ ನಿದ್ರೆಗೆ ಜಾರಿದೆ!! ಅಂದಿನಿಂದ ಎಲ್ಲ ತಂತ್ರಗಳನ್ನು ಸುಲಭವಾಗಿ ಅನುಭವಿಸಲು ಸಾಧ್ಯವಾಗಿದೆ. ಈಗ ನನ್ನ ಯೋಚನೆಗಳೆಲ್ಲ ಬದಲಾಗಿವೆ ಮತ್ತು ಜೀವನ ನಡೆಸುವ ವಿಧಾನ ಕೂಡ ಬದಲಾಗಿದೆ. ನನ್ನ ತೊಂದರೆಗಳೆಲ್ಲ ತಮ್ಮಷ್ಟಕ್ಕೆ ತಾವೇ ಪರಿಹಾರವಾಗುತ್ತಿವೆ. ಗುರೂಜಿ ಹಾಗೂ ಎಲ್ಲ ದಿವ್ಯಪುರುಷರುಗಳಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

–ಅಭಯ್ ಜೋಶಿ

ಒಂದು ರಾತ್ರಿ ನಾನು ನಿದ್ರೆಯಲ್ಲಿದ್ದಾಗ ಕೀಟವೊಂದರ ಜೋರಾದ ಶಬ್ದದಿಂದ ಎಚ್ಚರವಾಯಿತು. ಆಗ ನಾನು ಕೀಟಕ್ಕೆ, "ಈ ಶಬ್ದ ಮಾಡುವುದನ್ನು ನಿಲ್ಲಿಸಿ ನನಗೆ ನಿದ್ರೆ ಮಾಡಲು ಬಿಡು," ಎಂದು ಕೇಳಿಕೊಂಡೆ. ಆಶ್ಚರ್ಯವೆಂಬಂತೆ ಶಬ್ದ ನಿಂತು ಹೋಯಿತು. ಬೆಳಗ್ಗೆ ನಾನು ಎದ್ದೇಳುವವರೆಗೂ ಅದು ತೊಂದರೆಮಾಡಲಿಲ್ಲ!

–ಎಲ್. ಶಾರದಮ್ಮ

ಇತ್ತೀಚೆಗೆ ನನ್ನ ರಕ್ತದಲ್ಲಿ ಕ್ರಿಯಾಟಿನೈನ್ ಮಟ್ಟವು ಗರಿಷ್ಠ ಮಟ್ಟಕ್ಕಿಂತ ಅತಿ ಹೆಚ್ಚಾಗಿದೆಯೆಂದು ಪರೀಕ್ಷೆಯಿಂದ ತಿಳಿದು ಬಂದಿತು. ನಾನು ಮೂತ್ರಕೋಶಗಳಿಗೆ ಬೆಳಕು ಕಳುಹಿಸಿ ಪ್ರೀತಿ ವಾತ್ಸಲ್ಯದಿಂದ ಮಾತನಾಡಿ ಶೀಘ್ರವಾಗಿ ಗುಣಹೊಂದುವಂತೆ ಸಂದೇಶ ಕಳುಹಿಸಿದೆ. ಅದೃಷ್ಟವಶಾತ್ ಈಗ ಅದು ನಿಯಂತ್ರಣದಲ್ಲಿದ್ದು ವೈದ್ಯರಿಗೂ ಸಂತೋಷವಾಗಿದೆ.

–ರಾಜೇಂದ್ರ ರಂಗ್ನೇಕರ್

ನನ್ನ ಜೀವನವನ್ನು ಸಂರಕ್ಷಿಸಿ ಮಾರ್ಗದರ್ಶಿಸುತ್ತಿರುವ ಎಲ್ಲಾ ಮಾಸ್ಟರ್‌ಗಳಿಗೂ, ಋಷಿಗಳಿಗೂ, ಅಮರಾಜಿಯವರಿಗೂ ಮತ್ತು ಗುರೂಜಿಯವರಿಗೂ ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಗುರೂಜಿಯವರ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿರುವ, ನಮ್ಮ ಆಧ್ಯಾತ್ಮಿಕ ಸಾಧನೆಗೆ ಎಲ್ಲಾ ರೀತಿಯ ಅನು ಕೂಲತೆಗಳನ್ನು ಮತ್ತು ಸಹಾಯವನ್ನು ಒದಗಿಸುತ್ತಿರುವ ಜಯಂತ್‌ಜೀಯವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

–ಹೇಮನಾಥ್ ತೋಕರ್

ಕಳೆದ ಕೆಲವು ದಿನಗಳಿಂದ ಹತ್ತಿರದ ಸಂಬಂಧಿಗಳೊಡನೆ ನನ್ನ ಸಂಬಂಧ ವಿಷಮಗೊಂಡಿತ್ತು. ನಾನು ಋಷಿಗಳು, ಗುರೂಜಿ ಮತ್ತು ಅಮರರವರಲ್ಲಿ ಪ್ರಾರ್ಥಿಸಿದೆ. ನಾನು ಪ್ರತಿ ದಿನಾ ಧ್ಯಾನ ಮಾಡುತ್ತಿರುವುದರಿಂದ ಆ ಸಂದರ್ಭಗಳನ್ನೆಲ್ಲಾ ಹಾಗೇ ಒಪ್ಪಿಕೊಂಡೆ. ಆದರೆ ನನ್ನಲ್ಲೇ ಏನೋ ಸರಿಯಿಲ್ಲವೆಂದೆನಿಸುತ್ತಿತ್ತು. ತಕ್ಷಣ ನಾನು ಕುಳಿತು 30 ನಿಮಿಷಗಳವರೆಗೆ ಶಂಬಲದ ಮೂರನೆಯ ನಿಯಮವನ್ನು ಅಭ್ಯಾಸ ಮಾಡಿದೆ. ನಂತರದ ಕೆಲವು ಗಂಟೆಗಳಲ್ಲೇ ನಂಬಲಸಾಧ್ಯವೆನ್ನುವಂತೆ ಪರಿಸ್ಥಿತಿ ಸುಧಾರಿಸಿತು! ನನ್ನನ್ನು ಮಾರ್ಗದರ್ಶಿಸಲು ಹಾಗೂ ಸಹಾಯ ಮಾಡಲು ಸಿದ್ಧರಿರುವ ಋಷಿಗಳಿಗೆ, ಅಮರರವರಿಗೆ, ಗುರೂಜಿಯವರಿಗೆ ಹಾಗೂ ನಿಮ್ಮೆಲ್ಲರಿಗೂ ಅನಂತಾನಂತ ವಂದನೆಗಳು.

– ನಂದಿತಾ ಪಟೇಲ್

ನನ್ನೊಳಗಿದ್ದ, ಆದರೆ ಅಲ್ಲಿಯವರೆಗೆ ನನಗೇ ತಿಳಿಯದಿದ್ದ ಅನೇಕ ಭಾವನೆಗಳನ್ನು ಪ್ರಕಟಗೊಳಿಸುವುದರೊಂದಿಗೆ 2019ನೇ ವರ್ಷವು ಪ್ರಾರಂಭವಾಯಿತು. ಮೊದಮೊದಲು ಇದು ನನಗೆ ಮುಜುಗರ ತರುತ್ತಿತ್ತು. ಆದರೆ, ಅವುಗಳನ್ನು ಶುದ್ಧಗೊಳಿಸುವ ಸಲುವಾಗಿ ಪ್ರಳಯದ ಈ ಕಾಲದಲ್ಲಿ ಅವೆಲ್ಲವೂ ಪ್ರಕಟಗೊಳ್ಳುತ್ತವೆಂದು ನಂತರ ಅರಿತುಕೊಂಡೆ. ಹಾಗಾಗಿ ನಾನು ಅತ್ಯಂತ ಪ್ರಶಾಂತತೆಯಿಂದ ಅವುಗಳನ್ನು ಸಾಕ್ಷಿಯಂತೆ ನೋಡಲು ಪ್ರಯತ್ನಿಸುತ್ತಿದ್ದೇನೆ.

–ಪ್ರಿಯಂವದಾ ಕುಲಕರ್ಣಿ

ನನ್ನ ನಲವತ್ತು ವರ್ಷದ ಮಗನಿಗೆ ಮಧುಮೇಹವಿದೆ. ಸಕ್ಕರೆಯ ಮಟ್ಟ ಕಡಿಮೆಯಾಗುವವರೆಗೆ, ಕೆಲವು ದಿನಗಳ ಕಾಲ ಬೆಳಿಗ್ಗೆ ಮತ್ತು ಸಂಜೆ ಇನ್ಸುಲಿನ್ ತೆಗೆದುಕೊಳ್ಳಲು ವೈದ್ಯರು ಅವನಿಗೆ ತಿಳಿಸಿದರು. ನಂತರ, ಆ ಚುಚ್ಚುಮದ್ದನ್ನು ನಿಲ್ಲಿಸಲು ಸಾಧ್ಯವೇ ಇಲ್ಲವೆಂದು ವೈದ್ಯರು ನಮಗೆ ಹೇಳಿದಾಗ, ನನಗೆ ಅತ್ಯಂತ ಬೇಸರವಾಯಿತು. ನನ್ನ ಮಗನ ಮೇದೋಜೀರಕ ಗ್ರಂಥಿಗೆ ಹೆಚ್ಚು ಬೆಳಕನ್ನು ಕಳುಹಿಸಿ ಅವನಿಗಾಗಿ ಪ್ರಾರ್ಥಿಸಿದೆ. ಗುರೂಜಿಯವರ ದಯೆಯಿಂದ ಈಗ ಅವನು ಇನ್ಸುಲಿನ್ ಅನ್ನು ತೆಗೆದುಕೊಳ್ಳಬೇಕಾಗಿಲ್ಲ. ಅವನ ಆರೋಗ್ಯ ಸುಧಾರಿಸಿದೆ. ನಾನು ಗುರೂಜಿ ಹಾಗೂ ಬೆಳಕಿಗೆ ನಮ್ರತೆಯಿಂದ ನಮಿಸುತ್ತೇನೆ.

–ಅನಸೂಯ ಬೇಂದ್ರೆ.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ